OUP—23—4-4-69—5,000.

OSMANIA UNIVERSITY LIBRARY

Call No. K84 K21P Accession No. K 2784

Author [illegible] K2784

Title [illegible]

This book should be returned on or before the date last marked below.

ಸಂಸ್ಕೃತ ಸಾಹಿತ್ಯ ಸುಧಾ

- ೬ -

ಭಾಸ ಮಹಾಕವಿಯ

# ಪ್ರತಿಮಾ

( ನಾಟಕ )

Post Graduate Library
College of Arts & Commerce, O.U.

卐

ಲೇಖಕರು:

ಪಂಡಿತ ಜೆ. ಎ. ಕವಲಿ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೋ,

ಸುಭಾಸ ರೋಡ — ಧಾರವಾಡ

ಮುದ್ರಕರು ,
**ಎಲ್. ಆಯ್. ಆಕಳವಾಡಿ**
ಬಿ. ಎ., ಬಿ. ಕಾಮ್
ಮನೋಹರ ಮುದ್ರಣಾಲಯ,
ಮಂಗಳವಾರಪೇಟ : ಧಾರವಾಡ

ಬೆಲೆ ರೂ : ೦.೪೦

## ಮಕ್ಕಳ ಮುತ್ತಿನ ಮಾಲೆ

ಮುದ್ದು ಮಕ್ಕಳಿಗೆ ಮುದ್ದಾದ ಸರಳ ಬಾಷೆಯಲ್ಲಿ ಅವರ ಮನಸ್ಸನ್ನು ಆಕರ್ಷಿಸುವ ಸಾಹಿತ್ಯವನ್ನು ಒದಗಿಸುವದೇ ಈ ಮಾಲೆಯ ಉದ್ದೇಶ.

ಇದರಲ್ಲಿ ಧರ್ಮಸ್ಥಾಪಕರು, ವೀರರಾದ ರಾಣಿಯರು, ಶೂರರಾದ ರಾಜರು, ರಾಜಕೀಯ ಪಟುಗಳು, ಕ್ರಾಂತಿಕಾರರು, ಪುರಾಣದ ಮಹಾ ಪುರುಷರು, ವಿಜ್ಞಾನಿಗಳು, ವೈಜ್ಞಾನಿಕ ವಿಷಯದ ಚಿಕ್ಕ ಚಿಕ್ಕ ಹೊತ್ತಿಗೆಗಳು ಕಾಲಕಾಲಕ್ಕೆ ಪ್ರಕಟವಾಗುತ್ತವೆ.

**ಇವು ಮಕ್ಕಳಿಗೆ ಜ್ಞಾನದೀಪಗಳಂತಿವೆ !**

ರಾಮಾಶ್ರಯ ಬುಕ್ ಡಿಪೊ
— ಧಾರವಾಡ —

ಪ್ರಕಾಶಕರು:
**ಆಯ್. ಆರ್. ಆಕಳವಾಡಿ ಆ್ಯಂಡ ಸನ್ಸ**
ರಾಮಾಶ್ರಯ ಬುಕ್ ಡಿಪೊ,
ಸುಭಾಷರೋಡ : ಧಾರವಾಡ

# ಒ ಡೆ ಪು

ಸಂಸ್ಕೃತ ಭಾಷೆ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಅಗ್ರಪಟ್ಟವನ್ನು ಪಡೆದಿದೆ. ಈ ಮಾತಿಗೆ ಬೆಂಬಲವಾಗಿ ಅನೇಕ ಕಾರಣಗಳಿವೆ: **ಸಂಸ್ಕೃತ ಭಾಷೆ**– ೧. ಅತ್ಯಂತ ಪ್ರಾಚೀನತಮವಾಗಿದೆ; ೨. ದ್ರಾವಿಡ ಮತ್ತು ಕೆಲವು ಗಿರಿಜನ ಭಾಷೆಗಳನ್ನು ಉಳಿದು ದೇಶ–ವಿದೇಶಗಳ ಮುಖ್ಯಾಲುವಾಸಿ ಭಾಷೆಗಳಿಗೆ ಮಾತೃ ಸ್ಥಾನದಲ್ಲಿದೆ; ೩. ದ್ರಾವಿಡ ಭಾಷಾ ಸಂತತಿಗೆ ಕೂಡ '**ಸಾಕುತಾಯಿ**' ಯಾಗಿ ನಿಂತಿದೆ; ಆ ಸಂತತಿಯ ಸಂವರ್ಧನೆ ಗಾಗಿ ತನ್ನ ಅತುಲ ಸಂಪತ್ತನ್ನು ನೀಡಿದೆ. ೪. ಮಾನವ ಜೀವಿತದ ಹಿರಿಯ ಗುರಿ ಎನಿಸುವ ಮತ್ತು ಇಹ–ಪರ ಸೌಖ್ಯಗಳನ್ನು ಏಕೀಕರಿಸುವ ಅಧ್ಯಾತ್ಮವಾದದ ವೇದಾದಿ ವಾಙ್ಮಯಗಳಿಗೆ ಆರು ಸಾವಿರ ವರುಷಗಳ ಕೆಳಗೇ ಜನ್ಮ ಕೊಟ್ಟಿದೆ. ೫. ಜಾಗತಿಕ ಮಹಾಕವಿಗಳೆನಿಸಿದ ಭಾಸ, ಕಾಳಿದಾಸ, ಭವಭೂತಿ, ದಂಡಿ ಮುಂತಾದವರನ್ನು ಸಾಹಿತ್ಯ ಸಾಮ್ರಾಜ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿದೆ. ೬. ಮೇಣದಂತೆ ಮಿದು ವಾಗಿದ್ದು, ಅರ್ಥ ಗಾಂಭೀರ್ಯ ಶಬ್ದ ಸೌಷ್ಠವಗಳ ಬಲದಿಂದ ಯಾವುದೇ ವಿಚಾರವನ್ನು ಸಮರ್ಥಿಸಬಲ್ಲ ಶಕ್ತಿಯನ್ನು ಒಳಗೊಂಡಿದೆ. ೭. ಆಧ್ಯಾತ್ಮಿಕ ವಾಙ್ಮಯದಂತೆ, ವೈದ್ಯ, ಶಿಲ್ಪ, ವಿಜ್ಞಾನ, ಜ್ಯೋತಿಷ, ಗಣಿತ ಮುಂತಾದ ಭೌತಿಕ ಶಾಸ್ತ್ರಗಳ ಮಹಾ ಗ್ರಂಥ ಗಳನ್ನೂ ಒದಗಿಸಿದೆ. ೮. ಕಲಾವಿಲಾಸದ ಅಂಗಗಳಾದ ನೃತ್ಯ, ಸಂಗೀತ, ಚಿತ್ರಕಲೆ, ನಾಟಕ ಮೊದಲಾದ ಲಲಿತ–ಸಾಹಿತ್ಯಗಳಿಂದ ಓತಪ್ರೋತವಾಗಿ ತುಂಬಿಕೊಂಡಿದೆ. ೯. ರಸಾಲಂಕಾರ ಪರಿಪೋಷಣೆಗಂತೂ ಏಕಮೇವಾದ್ವಿತೀಯವಾಗಿ ಮೆರೆಯುತ್ತಿದೆ. ೧೦. ಸಂಸ್ಕೃತಿ ನಾಗರಿಕತೆಗಳ ಸುಂದರ ಸಮನ್ವಯವಾಗಿದೆ. ೧೧. ವಿಶ್ವದ ವಿವಿಧ ಭಾಷೆ ಗಳ ಅಭ್ಯಾಸಕ್ಕೆ ಮಿಗಿಲಾದ ಮಾಧ್ಯಮವೆನಿಸಿದೆ...............

ಸಂಸ್ಕೃತ ಭಾಷೆಯ ಶ್ರೇಷ್ಠತೆಯ ಬಗೆಗೆ ಇನ್ನೂ ಕೆಲವು ಕಾರಣಗಳನ್ನು ಕೊಡ ಬಹುದು. ಎಂತೆಯೇ ಇದನ್ನು ದೇವವಾಣಿ, ಆರ್ಷವಾಣಿ, ಗೀರ್ವಾಣವಾಣಿ ಮುಂತಾಗಿ ಪವಿತ್ರ ನಾಮಗಳಿಂದ ಗೌರವಿಸಲಾಗಿದೆ. ಇಂತಹ ಚಿರನೂತನ ಭಾಷೆಯನ್ನು '**ಮೃತ ಭಾಷೆ**' ( Dead language ) ಎಂದು ಕರೆಯುವುದು, ಗುಣವನ್ನು ಅಗೌರವಿಸಿ ದಂತೆ; ಅದಕ್ಕಿಂತಲೂ ಅಧಿಕವಾಗಿ ನಮ್ಮ ಮೂರ್ಖತನದ ಮೆರವಣಿಗೆಯನ್ನು ಮಾಡಿ ಕೊಂಡಂತೆ ! ಸಂಸ್ಕೃತ ಭಾಷೆಯ ಮಹತ್ತ್ವ ಕಡಮೆಯಾದಂತೆ, ಭಾರತೀಯ ನಾಗರಿ ಕತೆ, ಸುಸಂಸ್ಕೃತಿಗಳ ಮಟ್ಟವೂ ಕೆಳಗೆ ಇಳಿಯಹತ್ತಿದೆ ಎಂಬುದು ವಿಚಾರವಂತರಿಗೆ ಹೊಳೆಯದಿರದು.

ಹೀಗೆ ಹೇಳಿದ ಮಾತ್ರಕ್ಕೆ, ಅನ್ಯಭಾಷೆಗಳು ಅಸಂಸ್ಕೃತ, ಅಪರಿಪೂರ್ಣ ಎಂದು ಹೇಳುವ ಉದ್ದೇಶ ನಮ್ಮದಲ್ಲ. ದ್ರಾವಿಡ ಭಾಷೆಯಲ್ಲಿ ಆಧ್ಯಾತ್ಮಿಕ – ಭೌತಿಕ ಮಹಾ ಶಾಸ್ತ್ರಗಳಿಲ್ಲವೆ ? ಲಲಿತ ಸಾಹಿತ್ಯ ಸಮೃದ್ಧಿಯಿಲ್ಲವೇ ? ಎಂದು ಕೇಳುವವರೂ ಉಂಟು. ಅವರ ಆಕಾಂಕ್ಷೆಗೆ ಆನಂದದಿಂದ ಸಮ್ಮತಿಯನ್ನು ಸೂಚಿಸುತ್ತೇವೆ. ಆದರೆ, ಅದೇ ಪ್ರಸಂಗದಲ್ಲಿ, ಅನ್ಯಭಾಷಾ ಸಂಪ್ರದಾಯದ ಮಹಾನುಭಾವರು ಮೊತ್ತಮೊದ ಲಿಗೆ ಸಂಸ್ಕೃತ ಸಾಹಿತ್ಯಗಳನ್ನು ಆಳವಾಗಿ ಅಭ್ಯಸಿಸಿದ್ದರೆಂಬುದನ್ನೂ ಆದರ ಬಲ

ದಿಂದಲೇ ವಾಙ್ಮಯ ಸಾಹಿತ್ಯ – ಸೃಷ್ಟಿಗಳ ಸ್ಫೂರ್ತಿಯನ್ನು ಪಡೆದರೆಂಬುದನ್ನೂ ಹೇಳ ಬಯಸುತ್ತೇವೆ. ಮುಂದೆ ಕಾಲಮಾನಕ್ಕೆ ತಕ್ಕಂತೆ ಹೊಸ ಹೊಸ ವಿಚಾರ – ವಿಧಾನ ಗಳನ್ನು ತಮ್ಮ ಕೃತಿಗಳಲ್ಲಿ ಸೇರಿಸಿರಬಹುದು. ಬದಲಾಗುತ್ತಿರುವ ಜಗತ್ತಿನಲ್ಲಿ ಇದು ಸಹಜ ಸತ್ಯವೇ ಎನ್ನೋಣ. ಎಂದ ಮಾತ್ರಕ್ಕೆ, ಆರಂಭದಲ್ಲಿ ಅವರು ಪಡೆದ ಸಂಸ್ಕೃತ ಭಾಷಾ ಪರಿಣತಿಯ ಋಣವನ್ನು ಮರೆಯುವಂತಿಲ್ಲ.

ಇಂತಹ ಅಮೌಲ್ಯ ಸಂಸ್ಕೃತ ಭಾಷೆ ಇಂದು– ದೇಶವಿದೇಶಗಳ ಮಾತು ಹಾಗಿರಲಿ– ಭಾರತದಲ್ಲಿಯೇ ಅನವಸ್ಥೆ ದುರವಸ್ಥೆಗಳಿಗೆ ಈಡಾಗಿದೆ. ಇದರಿಂದ ಭಾರತೀಯ ಜನಜೀವನದ ಪ್ರಗತಿಗೆ ಬಹುಮುಖವಾದ ಬರಡುತನ ಬಂದಿದೆ ಎಂದು ಆಧುನಿಕ ಜನನಾಯಕರು ಕಂಡು ಕೊಂಡಿದ್ದಾರೆ. ಅದಕ್ಕಾಗಿಯೇ, ಸಂಸ್ಕೃತ ಭಾಷೆಯ ಪುನರುಜ್ಜೀವನ ಪುನಾರಚನೆಗಳ ಸಲುವಾಗಿ ದೇಶದಾದ್ಯಂತ ಬಗೆಬಗೆಯ ಚಟುವಟಿಕೆ ಗಳನ್ನು ಆರಂಭಿಸಿದ್ದಾರೆ. ಅವರ ಮಹಾಸೇತು ಬಂಧನ ಕಾರ್ಯದಲ್ಲಿ ನಮ್ಮ **'ಸಂಸ್ಕೃತ ಸಾಹಿತ್ಯ ಸುಧಾ'** ಪುಸ್ತಕಮಾಲೆ **'ಅಳಿಲುಸೇವೆ'.**

ಮೂರು ವರುಷಗಳ ಬುದ್ಧಿ ನೂರು ವರುಷಗಳ ವರೆಗೆ— ಎಂದು ಕನ್ನಡದಲ್ಲಿ ನಾಣ್ಣುಡಿ. ಎಳೆಯ ಗಿಡದ ಮೇಲೆ ಕೆತ್ತಿದ ಅಕ್ಷರಗಳು, ಗಿಡದ ಬಳವೆುಯೊಡನೆ ಬೆಳೆಯುತ್ತಲೇ ಹೋಗುತ್ತಿವೆ, ಎಂಬುದು ಅನುಭವ ವೇದ್ಯ. ಈ ಕಾರಣದಿಂದ ಪ್ರಾಥಮಿಕ ಶಾಲೆಯ ಮಕ್ಕಳಿಂದ ಹಿಡಿದು ಅಕ್ಕರಿಗರಾದ ಮುಪ್ಪಿನವರ ವರೆಗೂ ಓದಲು ಅನುಕೂಲವಾಗುವಂತೆ, ತಿಳಿಗನ್ನಡ ನುಡಿ ಬಟ್ಟಲಿನಲ್ಲಿ ಸಂಸ್ಕೃತ ಸಾಹಿತ್ಯದ ಮಹಾ ಮಹಾ ಕವಿಗಳ ಸಾಹಿತ್ಯ ಸುಧೆಯ ಸಾರವನ್ನು ಕನ್ನಡ ಕಥಾರೂಪದಲ್ಲಿ ಸುರಿಯಲಾಗಿದೆ. ಇದರ ಸ್ವಾದ – ಸೌಂದರ್ಯಗಳಿಂದ ಸರ್ವರೂ ಸಂತೋಷ ಪಡಬೇಕೆಂಬುದೇ ನಮ್ಮ ಹೆಬ್ಬಯಕೆ.

ಪ್ರತಿಮಾ ನಾಟಕವನ್ನು ರಚಿಸಿದವರು ಭಾಸಮಹಾಕವಿ. ಪ್ರಪಂಚದ ಯಾವ ಭಾಷೆಗಿಂತಲೂ ಮೊತ್ತಮೊದಲಿಗೇ ಏಕಾಂಕ ನಾಟಕಗಳನ್ನು ಬರೆದ ಗೌರವ ಈತನಿಗೇ ಸಲ್ಲಬೇಕು. ಕಾಳಿದಾಸನಂತಹ ಕವಿಕುಲಗುರುವಿಗೂ ಈತನಿಂದಲೇ ನಾಟಕೀಯ ಸ್ಫೂರ್ತಿ ಹುಟ್ಟಿತೆಂದು ಹೇಳುವುದು ಅತ್ಯುಕ್ತಿಯಲ್ಲ. ಭಾಸಮಹಾ ಕವಿಯ ಕೆಲವು ನಾಟ್ಯೋಕ್ತಿಗಳು ಶಬ್ದಾಂತರಗೊಂಡು ಕಾಳಿದಾಸ ಕವಿಯ ಶಾಕುಂತಲ ದಲ್ಲಿ ಸೇರಿರುವದನ್ನು ಕಾಣಬಹುದು.

ಪ್ರಸ್ತುತ ಪ್ರತಿಮಾ ನಾಟಕ ರಾಮಾಯಣದಲ್ಲಿಯ ಶ್ರೀರಾಮಚಂದ್ರನ ರಾಜ್ಯ ವಿಯೋಗದಿಂದಾರಂಭಿಸಿ ರಾಜ್ಯಾಭಿಷೇಕದ ವರೆಗಿನ ಕತೆಯನ್ನು ಒಳಗೊಂಡಿದೆ. ಕತೆ ಜನಸಾಮಾನ್ಯರಿಗೂ ತಿಳಿದಿದೆ. ಭಾಸ ಮಹಾಕವಿಯ ನಾಟಕೀಯ ಕೈಚಳಕದಿಂದ ಎಲ್ಲವೂ ಹೊಸ ಹೊಸತಾಗಿಯೇ ತೋರುತ್ತಿದೆ. ಪ್ರತಿಮೆಗಳ ಕಲ್ಪನೆಯಂತೂ ಪೂರಾ ಆತನದೇ. 'ನಬ್ರೂಯಾತ್ ಸತ್ಯಮಪ್ರಿಯಂ' ಈ ಶಾಸ್ತ್ರ ವಾಕ್ಯದ ವ್ಯವಹಾರಿಕ ಆಚರಣೆಯ ಕೌಶಲವನ್ನು ಈ ಕಲ್ಪನೆಯಲ್ಲಿ ಕಾಣಬಹುದು. ಭರತನ ಪಾತ್ರದಲ್ಲಿ ಬಂಧು ಪ್ರೇಮದ ಉಚ್ಚತಮ ಮಾದರಿಯಿದೆ. ಚಿನ್ನದ ಚಿಗರೆಯ ವಿಷಯ ಹೊಸ

ತೊಂದು ರೂಪದಲ್ಲಿಯೇ ವ್ಯೈದಾಳಿದೆ. ಅಭಿನಯಕ್ಕೆ ಅನುಕೂಲವಾಗುವಂತೆ ಕತೆಯನ್ನು ಕಳೆಗಟ್ಟಿಸುವ ಕೈಚಳಕ ಕವಿಯ ವೈಶಿಷ್ಟ್ಯವೆಂದೇ ಹೇಳಬೇಕು.

ಕವಿಯ ಮೂಲಕೃತಿಗೆ ಅನ್ಯಾಯ-ಅಪಚಾರಗಳಾಗದಂತೆ, ಅದರಲ್ಲಿ ನಮ್ಮದೇನನ್ನೂ ಬೆರೆಸದಂತೆ, ಸಾರದ ಪಾಕವನ್ನು ಕನ್ನಡದಲ್ಲಿ ಇಳಿಸಿದೆ. ಕುಂದು-ಕೊರತೆಗಳನ್ನು ರಸಜ್ಞರು ಸಹೃದಯತೆಯಿಂದ ಸೂಚಿಸಿದರೆ, ಕೃತಜ್ಞತೆಯಿಂದ ಸ್ವೀಕರಿಸಿ ಮುಂದಿನ ಮುದ್ರಣದಲ್ಲಿ ಸರಿಪಡಿಸುತ್ತೇನೆ.

ಸಾಧನಕೆರೆ, ಧಾರವಾಡ —ಪಂ. ಕವಲಿ

೧೫ – ೮ – ೧೯೬೧

ಭಾಸ ಮಹಾಕವಿಯ

# ಪ್ರತಿಮಾ

ರಾಮಾಯಣ ಭಾರತೀಯರ ಪವಿತ್ರ ಗ್ರಂಥ. ಇದರಲ್ಲಿ ಶ್ರೀ ರಾಮನ ಕತೆಯೇ ಮುಖ್ಯ. ಈತನ ಹೆಸರಿನಿಂದಲೇ ಅದು ರಾಮಾಯಣ ಎನಿಸಿಕೊಂಡಿದೆ. ರಾಮಚಂದ್ರನ ಕತೆಯ ಹಿನ್ನೆಲೆಯಲ್ಲಿ ಆತನ ಪೂರ್ವದ ಅರಸುಗಳ ಚರಿತ್ರಗಳೂ ಉಂಟು. ಈ ಎಲ್ಲ ದೊರೆಗಳನ್ನು ರಘುಕುಲದವರು, ಇಕ್ಷ್ವಾಕು ವಂಶದವರು, ಸೂರ್ಯಸಂತತಿಯವರು ಎಂದು ಹೇಳುವುದುಂಟು. ಇವರೆಲ್ಲರೂ ಅಯೋಧ್ಯೆಯಲ್ಲಿ ಆಳುತ್ತಿದ್ದರು.

ರಘುಕುಲದ ಅರಸರು ಬಾಹುಬಲದಿಂದ ಭೂಲೋಕದಲ್ಲಿ ಒಕ್ಕೊಡೆಯ ಸಮ್ರಾಟರಾಗಿದ್ದರು. ಆ ಕಾಲಕ್ಕೆ ದೇವತೆಗಳಿಗೂ ದಾನವರಿಗೂ ಮೇಲಿಂದ ಮೇಲೆ ಕಾಳಗ ನಡೆಯುತ್ತಲೇ ಇದ್ದುವು. ಆಗ ದೇವತೆಗಳು ರಘುವಂಶದ ಅರಸರ ನೆರವನ್ನು ಬೇಡುತ್ತಿದ್ದರು. ಇವರು ದೇವಲೋಕಕ್ಕೆ ಹೋಗುತ್ತಿದ್ದರು; ರಾಕ್ಷಸರನ್ನು ಸದೆಬಡಿಯುತ್ತಿದ್ದರು. ಇದರಿಂದಾಗಿ ದೇವಲೋಕದಲ್ಲಿ ಕೂಡ ಇವರಿಗೆ ಹೆಚ್ಚಾಗಿ ಮನ್ನಣೆಯಿತ್ತು.

ರಾಜ್ಯಭಾರದಲ್ಲಿ ಕೂಡ ಇಕ್ಷ್ವಾಕು ದೊರೆಗಳು ಪ್ರಜಾಪ್ರೇಮಿಗಳೆಂದು ಹೆಸರಾಗಿದ್ದಾರೆ. ಮಾತ್ರವಲ್ಲ, ಪ್ರಜೆಗಳು ಇವರನ್ನು ದೇವತೆಗಳೆಂದು ಪೂಜಿಸುತ್ತಿದ್ದರು. ಈ ನರಪಾಲರು ಧರ್ಮಾಚರಣೆಯಲ್ಲಿ ಶಾಸ್ತ್ರ ಮರ್ಯಾದೆಯನ್ನು ಎಳ್ಳನಿತೂ ಮೀರುತ್ತಿರಲಿಲ್ಲ:

ಬಾಲ್ಯದಲ್ಲಿ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದರು; ಶಸ್ತ್ರ–ಶಾಸ್ತ್ರಗಳ ವಿದ್ಯೆಯಲ್ಲಿ ಕುಶಲತೆಯನ್ನು ಪಡೆಯುತ್ತಿದ್ದರು. ತಾರುಣ್ಯದಲ್ಲಿ

ರಾಜ್ಯಭಾರವನ್ನು ತೆಗೆದುಕೊಳ್ಳುತ್ತಿದ್ದರು; ಬಾಹುಬಲದಿಂದ ಸಮ್ರಾಟರಾಗಿ, ಸದ್ಗುಣ ಬಲದಿಂದ ಪ್ರಜಾರಂಜಕರಾಗಿ ಆಳುತ್ತಿದ್ದರು. ಮತ್ತು ವಂಶದ ಬೆಳವಣಿಗೆಯ ಸಲುವಾಗಿ ಮದುವೆಯಾಗುತ್ತಿದ್ದರು; ಮಕ್ಕಳು ಹರಯಕ್ಕೆ ಬರುತ್ತಲೇ ಅವರಿಗೆ ರಾಜ್ಯವನ್ನು ಒಪ್ಪಿಸುತ್ತಿದ್ದರು; ತಾವು ವಾನಪ್ರಸ್ಥ ಆಶ್ರಮಕ್ಕೆ ಸಾಗುತ್ತಿದ್ದರು. ದಶರಥ ದೊರೆಯೂ ಈ ಪರಂಪರೆಯನ್ನು ಮೀರುವಂತೆ ಇರಲಿಲ್ಲ, ಮೀರಲೂ ಇಲ್ಲ.

ಇಕ್ಷ್ವಾಕುವಂಶದ ಈ ಅರಸು ಈಗಿನಿಂದ ಸುಮಾರು ಮೂರು ಸಾವಿರ ವರುಷಗಳಿಗಿಂತ ಮೊದಲು ಅಯೋಧ್ಯೆಯಲ್ಲಿ ಆಳುತ್ತಿದ್ದ. ಈತನಿಗೆ ಮೂವರು ಹೆಂಡಿರು; **ಕೌಸಲ್ಯೆ, ಕೈಕೇಯಿ** ಮತ್ತು **ಸುಮಿತ್ರೆ.** ಇವರಿಗೆ ನಾಲ್ವರು ಮಕ್ಕಳಾದರು; ಕೌಸಲ್ಯೆಗೆ **ರಾಮಚಂದ್ರ,** ಕೈಕೇಯಿಗೆ **ಭರತ,** ಸುಮಿತ್ರೆಗೆ **ಲಕ್ಷ್ಮಣ** ಮತ್ತು **ಶತ್ರುಘ್ನ.** ಮಕ್ಕಳಲ್ಲಿ ರಾಮಚಂದ್ರ ಎಲ್ಲರಿಗಿಂತ ಹಿರಿಯ. ಅಣ್ಣ-ತಮ್ಮಂದಿರು, ದೇಹ ನಾಲ್ಕಾದರೂ ಜೀವ ಒಂದು ಎನುವಂತೆ, ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು.

ದಶರಥನಿಗೆ ಇಳಿ ಹರಯ ಒದಗಿತು. ರಾಮಚಂದ್ರ ಏರು ಹರಯಕ್ಕೆ ಬಂದಿದ್ದ. ಹಿರಿಯ ಮಗನಿಗೆ ಪಟ್ಟವನ್ನು ಕೊಡಬೇಕು; ತಾನು ವನಕ್ಕೆ ಹೊರಡಬೇಕು— ಎಂದು ದಶರಥ ವಿಚಾರ ಮಾಡಿದ.

## ಪ್ರತಿಮಾ

ದಶರಥರಾಜನಿಗೆ **ಸುಮಂತ** ಆಪ್ತಮಂತ್ರಿ; **ವಸಿಷ್ಠ ಋಷಿ**ಗಳು ಗುರುಗಳು. ಅರಸು ತನ್ನ ಯಾವ ವಿಚಾರವನ್ನೂ ಅವರ ಇದಿರಿಗೆ ಇಡುತ್ತಿದ್ದ; ವಿಚಾರ ವಿನಿಮಯ ಮಾಡುತ್ತಿದ್ದ. ಕೊನೆಗೆ ನಿರ್ಣಯವಾದಂತೆ ಮುಂದಿನ ಕಾರ್ಯವನ್ನು ಕೈಕೊಳ್ಳುತ್ತಿದ್ದ. ಶ್ರೀರಾಮನಿಗೆ ಪಟ್ಟಕಟ್ಟುವ ವಿಚಾರವನ್ನು ಮಂತ್ರಿಗೂ ಗುರುಗಳಿಗೂ ತಿಳಿಸಿದ ದಶರಥ.

ಶ್ರೀರಾಮನ ಪಟ್ಟಾಭಿಷೇಕ ಅವರಿಬ್ಬರಿಗೂ ಸಂತೋಷದ ವಿಷಯವೇ. ಆದರೆ ದಶರಥರಾಜ ವನಕ್ಕೆ ಹೋಗುವುದನ್ನು ಸಮ್ಮತಿಸಬೇಕೋ ಬೇಡವೋ ಚರ್ಚೆ ನಡೆಯಿತು. ಅರಸ ತನ್ನ ಪೂರ್ವಜರ ಪರಂಪರೆಯನ್ನು ಕಾಯ್ದುಕೊಳ್ಳಲು ಹಟವನ್ನು ಹಿಡಿದ. ರಾಮ ಪಟ್ಟಾಭಿಷೇಕಕ್ಕೆ ಅವರಿಬ್ಬರ ಒಪ್ಪಿಗೆ ದೊರೆಯಿತು. ಈ ವಿಚಾರಕ್ಕೆ ಪ್ರಜೆಗಳ ಸಮ್ಮತಿಯನ್ನು ದೊರಕಿಸುವುದೂ ಅವಶ್ಯವಾಗಿತ್ತು. ಮಹಾರಾಜರ ಅಪ್ಪಣೆ ಹೊರಟಿತು. ಹೊಣೆಗಾರ ಅಧಿಕಾರಿಗಳೂ ಪುರ ಪ್ರಮುಖರೂ ಗಣ್ಯ ನಾಗರಿಕರೂ ಆಸ್ಥಾನದಲ್ಲಿ ಕೂಡಿದರು. ಕೋಸಲ ರಾಜ್ಯವೇ ಸಂಕ್ಷಿಪ್ತ ರೂಪದಲ್ಲಿ ಅಲ್ಲಿಗೆ ಬಂದಿತ್ತೆಂದು ಹೇಳಬಹುದು. ವಸಿಷ್ಠರು ವಿಚಾರ ವಿನಿಮಯ ಗೋಷ್ಠಿಯ ಹಿರಿಯರಾಗಿದ್ದರು. ಅವರೇ ಅಂದಿನ ವಿಷಯವನ್ನು ಎಲ್ಲರಿಗೂ ತಿಳಿಸಿದರು.

ಮಹಾರಾಜರು ವಾನಪ್ರಸ್ಥ ಆಶ್ರಮಕ್ಕೆ ಹೋಗಬೇಕೆನ್ನುತ್ತಾರೆ. ಆ ಪೂರ್ವದಲ್ಲಿ ಶ್ರೀರಾಮಚಂದ್ರನಿಗೆ ಅಯೋಧ್ಯೆಯ ಪಟ್ಟಾಭಿಷೇಕವಾಗಬೇಕೆಂದು ಅವರ ಇಚ್ಛೆ. ಈ ಬಗೆಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು.

ಸಭಾಸದರು ತುಂಬಾ ತೊಡಕಿನಲ್ಲಿ ಸಿಕ್ಕಿಕೊಂಡರು. ಮಹಾರಾಜರ ವಿಚಾರ ಧರ್ಮಶಾಸ್ತ್ರ ಸಮ್ಮತವಾಗಿತ್ತು. ಹಾಗೆಯೇ, ಶ್ರೀರಾಮಚಂದ್ರ ಪ್ರಜಾಪ್ರೀತಿಯನ್ನು ಗಳಿಸಿಕೊಂಡಿದ್ದ. ಹೆಚ್ಚು ಚರ್ಚೆಯಾಗಲಿಲ್ಲ. ಮಹಾರಾಜರ ಮತವನ್ನು ಎಲ್ಲರೂ ಒಮ್ಮತದಿಂದ ಒಪ್ಪಿದರು.

ಬಳಿಕ ಶ್ರೀರಾಮಚಂದ್ರನನ್ನು ಅಲ್ಲಿಗೆ ಕರೆಸಲಾಯಿತು. ದಶರಥ ಮಹಾರಾಜ ಆತನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ; ಮುದ್ದುಗೆಯ್ಯುತ್ತ ಹೇಳಿದ—

ಕೌಸಲ್ಯಾನಂದನ, ನನಗಿನ್ನು ವಯಸ್ಸಾಯಿತು. ಧರ್ಮಶಾಸ್ತ್ರದಂತೆ ನಾನು ವಾನಪ್ರಸ್ಥ ಆಶ್ರಮವನ್ನು ಸ್ವೀಕರಿಸಬೇಕು. ನೀನು

ಹಿರಿಯ ಮಗ; ಪಟ್ಟ ಬಾಧ್ಯ, ಆದುದರಿಂದ, ಈ ಕೋಸಲ ರಾಜ್ಯ ಭಾರವನ್ನು ಸ್ವೀಕರಿಸಬೇಕು. ಬೇಗನೆ ಪಟ್ಟಾಭಿಷೇಕ ಮಹೋತ್ಸವ ವನ್ನು ನೆರವೇರಿಸಬೇಕಾಗಿದೆ.

ತಂದೆಯ ಅಗಲಿಕೆ! ಪಿತೃವತ್ಸಲನಾದ ರಾಮಚಂದ್ರನಿಗೆ ಸಹನವಾಗಲಿಲ್ಲ. ಕುತ್ತಿಗೆ ಬಿಗಿದು ಬಂದಿತು. ಮಾತುಗಳು ಹೊರಡ ಲಿಲ್ಲ. ತಟ್ಟನೆ ಎದ್ದು ತಂದೆಯ ಪಾದಗಳ ಮೇಲೆ ಹಣೆಯಿಟ್ಟ; ಬಳ ಬಳ ಸುರಿಯುವ ಕಣ್ಣೀರುಗಳಿಂದ ಅವುಗಳನ್ನು ತೊಳೆಯಹತ್ತಿದ. ಮಗನ ವಿನಯವನ್ನು ಪಿತೃಭಕ್ತಿಯನ್ನು ಕಂಡು ದಶರಥ ರಾಜನ ಎದೆಯೂ ತುಂಬಿ ಬಂದಿತು. ಆತನ ಕಣ್ಣುಗಳಿಂದಲೂ ಅಶ್ರುಗಳು ಸುರಿಯಹತ್ತಿದವು; ರಾಮಚಂದ್ರನ ತಲೆಯ ಮೇಲೆ ಪ್ರೇಮ ಜಲದ ಅಭಿಷೇಕ ಮಾಡಿದುವು. ತಂದೆ ಮಕ್ಕಳ ಈ ಕರುಣದ ನೋಟವನ್ನು ಕಂಡು ನೆರೆದವರ ಕಣ್ಣುಗಳೂ ಹನಿಗೂಡಿದುವು. ಕ್ಷಣ ಹೊತ್ತು ಸಭೆಯೆಲ್ಲ ನಿಃಶಬ್ದ, ನೀರವವಾಗಿತ್ತು.

ಆಗ ಚೇತರಿಸಿಕೊಂಡು ಮಹಾರಾಜನೇ ಮಾತಾಡಿದ, ರಾಮ ಚಂದ್ರಾ, ನೀನು ರಾಜ್ಯವನ್ನು ಸ್ವೀಕರಿಸಲೇಬೇಕು. ಈ ಮುಪ್ಪಿನ ತಂದೆಯ ಮಾತನ್ನು ಅಲ್ಲಗಳೆಯಬೇಡ. ನಿನಗೆ ನನ್ನ ಜೀರ್ಣ ಪಂಚ ಪ್ರಾಣಗಳ ಆಣೆಯಿದೆ!

ರಾಮಚಂದ್ರನಿಗೆ ಬೇರೆ ಹಾದಿಯೇ ಉಳಿಯದಾಯಿತು. ತಂದೆಯ ಪ್ರಾಣಗಳನ್ನು ಬದುಕಿಸುವುದು ಮಗನ ಕರ್ತವ್ಯವಾಗಿತ್ತು. ಆಗಲಿ! ಎಂದು ಒಪ್ಪಿಕೊಂಡ ರಾಮಚಂದ್ರ, ಸಭೆಯಲ್ಲ ಶ್ರೀರಾಮ ಚಂದ್ರರಿಗೆ ಜಯವಾಗಲಿ! ಎಂದು ಹರ್ಷದ ಜಯಕಾರಮಾಡಿತು.

ಈ ಸುದ್ದಿ ಗಾಳಿಯೋಟದಿಂದ ರಾಜ್ಯದಲ್ಲೆಲ್ಲ ಹಬ್ಬಿತು. ಎಲ್ಲೆ ಲ್ಲಿಯೂ ಆನಂದವೇ ಆನಂದ. ಮನೆಮನೆಗೆ ತಳಿರು ತೋರಣ ತೂಗಾಡಿದುವು; ಸಾಲು ದೀಪಗಳು ಬೆಳಗಿದವು; ಮಂಗಲವಾದ್ಯ ಗಳು ಮೊಳಗಿದುವು. ದೇವಾಲಯಗಳಲ್ಲಿ ಅರ್ಚಕರು ಸ್ವಸ್ತಿ ವಾಚನ ಮಾಡಿದರು.

ಅರಮನೆಯ ಅಧಿಕಾರಿಗಳು ಕಾರ್ಯಕಾರಿಗಳು ಇವರಿಗಂತೂ ಬಿಡುವಿಲ್ಲದಷ್ಟು ಕಾರ್ಯಗಳು.

ಅರಮನೆಗೆ ಬರಹೋಗುವವರ ಸಂಖ್ಯೆ ಎಣಿಕೆ ಮೀರಿತು. ಆಳಿದ ಮಹಾರಾಜರ ಅಂತಿಮ ದರ್ಶನವನ್ನು ಪಡೆಯಬೇಕಾಗಿತ್ತು; ಅವ ರನ್ನು ವನಕ್ಕೆ ಬೀಳ್ಕೊಡಬೇಕಾಗಿತ್ತು. ಆಳಲಿರುವ ಮಹಾರಾಜ ರಾಮಚಂದ್ರನಿಗೆ ಕಾಣಿಕೆಗಳನ್ನು ಸಾದರ ಪಡಿಸಬೇಕಾಗಿತ್ತು. ಜನ ಸಾಗರದ ಹೆದ್ದೆರೆಗಳಂತೆ ಆಗಮನ ನಿರ್ಗಮನ ನಡೆದಿತ್ತು.

ಪ್ರತೀಹಾರಿ ಒಬ್ಬೊಬ್ಬರಿಗೆ ಒಂದೊಂದು ಕೆಲಸವನ್ನು ಒಪ್ಪಿಸು ತ್ತಿದ್ದಳು. ಕಂಚುಕೀಯನಿಗೆ ಶ್ರೀರಾಮಚಂದ್ರ ಪ್ರಭುವಿನ ಪಟ್ಟಾಭಿಷೇ ಕದ ಸಕಲ ಸಾಹಿತ್ಯಗಳನ್ನು ಒದಗಿಸಲು ಹೇಳಿದಳು.

ಅವನು ತಾನಾಗಿಯೇ ಎಲ್ಲ ಸಾಹಿತ್ಯಗಳನ್ನೂ ಸಿದ್ಧಮಾಡಿಯೇ ಇಟ್ಟಿದ್ದ. ಛತ್ರ, ಚಾಮರ, ನಂದಿಪಟಹ, ಭದ್ರ ಸಿಂಹಾಸನ, ಮಂಗಲ ಸುವರ್ಣ ಕುಂಭಗಳಲ್ಲಿ ದರ್ಭಕುಸುಮ ತೀರ್ಥ ಇತ್ಯಾದಿ ಗಳನ್ನು ಪೂರಯಿಸಿದ್ದ. ಪುಷ್ಪರಥ ಸಜ್ಜಾಗಿತ್ತು.

ಸಮಯಕ್ಕೆ ಸರಿಯಾಗಿ ಪುರ ಪ್ರಮುಖರೂ ಗಣನೀಯ ನಾಗರಿ ಕರೂ ಸಾಮಂತರಾಜರೂ ಪುರೋಹಿತರೂ ಗುರುಗಳೂ ದಯ ಮಾಡಿಸಿದರು. ವಸಿಷ್ಠ ಋಷಿಗಳು ಅಗ್ರಪೀಠವನ್ನು ಅಲಂಕರಿಸಿದರು.

ಪಟ್ಟಾಭಿಷೇಕ ಉತ್ಸವದ ಅಂಗವಾಗಿ ಮನೋರಂಜನೆಯನ್ನು ಏರ್ಪಡಿಸಲಾಗಿತ್ತು. ಪ್ರತೀಹಾರಿ **ಸಾರಸಿಕೆ**ಯನ್ನು ಕರೆದಳು; ಕಾಲಕ್ಕೆ ತಕ್ಕ ನಾಟಕವನ್ನು ಅಭಿನಯಿಸುವುದಕ್ಕೆ ಸಂಗೀತ ಶಾಲೆಯವ ರಿಗೆ ತಿಳಿಸು— ಎಂದು ಹೇಳಿದಳು.

ನಾಟಕ ಸಿದ್ಧತೆಗೆ ಮೊದಲಾಯಿತು. ರಂಗಸಜ್ಜಿಕೆಯ ಕೆಲಸ ಅವದಾತಿಕೆಯ ಕಡೆಗಿತ್ತು. ನಾಟಕಕ್ಕೆ ಅಶೋಕವೃಕ್ಷದ ಚಿಗುರೆ ಲೆಯ ಶಾಖೆ ಬೇಕಾಗಿದ್ದಿತು. ರಂಗ ಪ್ರಸಾಧನ ಸಾಹಿತ್ಯಗಳನ್ನು ಒದಗಿಸುವ ರೇವಾ ಅದನ್ನು ಕೊಡಲಿಲ್ಲ. ಅವದಾತಿಕೆ ಚೇಷ್ಟೆಗಾಗಿ ನಾರುಮಡಿಗಳನ್ನು ಕದ್ದು ತಂದಳು. ನಡುದಾರಿಯಲ್ಲಿಯೇ ಸೀತಾ

ದೇವಿ ಅದನ್ನು ನೋಡಿದಳು. ಆಗಂತೂ ಅವದಾತಿಕೆ ತೀರಾ ಹೌಹಾರಿದಳು; ತನ್ನನ್ನು ಕ್ಷಮಿಸಬೇಕು, ಎಂದು ಕೇಳಿಕೊಂಡಳು.

ಸೀತಾದೇವಿಗೆ— ಅವದಾತಿಕೆಯ ಮಾತಿನ ಅರ್ಥವಾಗಲಿಲ್ಲ. ಅಪರಾಧವೇನು ? ಕ್ಷಮೆಯೇಕೆ— ಎಂದು ಕೇಳಿದಳು.

ರೇವಾ ಕಡೆಯಿಂದ ವಲ್ಕಲಗಳನ್ನು ಕದ್ದು ತಂದ ವಿಚಾರವನ್ನೂ ಅದಕ್ಕೆ ಕಾರಣವನ್ನೂ ನಿವೇದಿಸಿದಳು ಅವದಾತಿಕೆ.

" ನಗೆಯಾಟಕ್ಕೆ ಆಗಲಿ, ಹೆರವರ ಒಡವೆಗಳನ್ನು ಕಳವು ಮಾಡುವುದು ತಪ್ಪು. ಹೋಗು, ಆಕೆಗೆ ಕೊಟ್ಟು ಬಾ ಇವುಗಳನ್ನು " ಸೀತಾದೇವಿ ತಿಳಿಹೇಳಿದಳು.

ಅವದಾತಿಕೆ ಹೊರಟು ನಿಂತಳು. ಅದೇಕೋ, ಸೀತಾದೇವಿಯ ಮನಸ್ಸು ಆ ನಾರುಬಟ್ಟೆಗಳ ಕಡೆಗೆ ಸೆಳೆಯಿತು.

" ಇಲ್ಲಿ ಕೊಡು ಅವುಗಳನ್ನು. ಉಟ್ಟುಗೊಳ್ಳಬೇಕೆಂದು ಮನಸ್ಸಾಗಿದೆ ನನಗೆ. " ಸೀತಾದೇವಿ ವಲ್ಕಲಗಳನ್ನು ತೆಗೆದುಕೊಂಡಳು; ಉಟ್ಟುಕೊಂಡು ಕೇಳಿದಳು " ಇವು ನನಗೆ ಚಂದ ಕಾಣುತ್ತಿವೆಯೇ ? "

" ಹುಟ್ಟು ಚೆಲುವೆಯರು ಇಟ್ಟುಕೊಂಡದ್ದೆಲ್ಲ ಚೆಂದವೇ ? ನಿಮ್ಮ ಮೈ ಮೇಲೆ ಇವು ಚಿನ್ನದ ಬಟ್ಟೆಗಳಂತೆ ಕಾಣುತ್ತಿವೆ ! " ಸೇವಕಿ ಹೇಳಿದಳು.

ತನ್ನ ಚೆಲುವಿಕೆಯನ್ನು ನೋಡಲು ಸೀತಾದೇವಿ ಕನ್ನಡಿಯನ್ನು ತರಿಸಿಕೊಂಡಳು; ತನ್ನ ದಿವ್ಯ ಸೌಂದರ್ಯವನ್ನು ನೋಡುತ್ತಿದ್ದಳು.

ಆಗ ಚೇಟಿ ಮಾತನಾಡಿದಳು— " ದೇವಿಯವರೆ, ಶ್ರೀರಾಮಭದ್ರರಿಗೆ ಪಟ್ಟಾಭಿಷೇಕವಾಗುತ್ತಿದೆಯಂತೆ, ಕಂಚುಕಿ ಹೇಳಿದ. "

" ಮಾವನವರಿಗೆ ಕ್ಷೇಮವಷ್ಟೇ ? " ಸೀತಾದೇವಿ ಯಾವುದೋ ಆಶಂಕೆಯಿಂದ ಕೇಳಿದಳು.

" ಸ್ವಯಂ ದಶರಥ ಮಹಾರಾಜರೇ ಅಭಿಷೇಕ ಮಾಡುತ್ತಾರೆಂತೆ ! " ಸೀತೆಗೆ ಧೈರ್ಯವನ್ನು ಕೊಟ್ಟಳು ಚೇಟಿ.

ಸೀತಾದೇವಿಗೆ ಇಮ್ಮಡಿ ಹರುಷವಾಯಿತು. ತನ್ನ ಮೈಮೇಲಿನ ಒಡವೆಗಳನ್ನೆಲ್ಲ ಚೇಟಿಗೆ ಮೆಚ್ಚು ಕೊಟ್ಟುಬಿಟ್ಟಳು.

ಆ ವೇಳೆಗೆ ಮಂಗಲವಾದ್ಯಗಳ ಮೊಳಗು ಕೇಳಿ ಬರತೊಡಗಿತ್ತು. ದಿಕ್ತಟಗಳನ್ನು ತುಂಬಿ ಮೊರೆಯುತ್ತಿತ್ತು ಆ ದನಿ. ಅಭಿಷೇಕ ನಡೆಯುತ್ತಿರಬೇಕು, ಎಂದು ಅವರೆಲ್ಲ ಆನಂದಪಟ್ಟರು.

ಇದ್ದಕ್ಕಿದ್ದಂತೆ ದನಿ ನಿಂತುಹೋಯಿತು. ಚೇಟಿ ಹೌಹಾರಿದಳು.

"ದೇವಿಯವರೇ, ವಾದ್ಯಗಳು ಒಮ್ಮೆಲೆ ಏಕೆ ನಿಂತಿರಬಹುದು?"

"ಅಭಿಷೇಕಕ್ಕೆ ಯಾವ ವಿಘ್ನ ಬಂದಿತೋ! ಅಥವಾ, ಅರಮನೆಯಲ್ಲಿ ಇಂತಹ ಅವಾಂತರಗಳು ನಡೆಯತಕ್ಕುವೇ!" ಸೀತಾದೇವಿ ಹಗುರಾಗಿಯೇ ಹೇಳಿದಳು.

ಈ ಸಮಯಕ್ಕೆ ರಾಮಚಂದ್ರ ರಾಜಸಭೆಯಿಂದ ಹೊರಬಿದ್ದ; ಸೀತಾದೇವಿಯನ್ನು ಹುಡುಕುತ್ತ ಬಂದ. ಆತನ ರಾಜ್ಯಾಭಿಷೇಕ ಉತ್ಸವ ನಿಂತು ಹೋಗಿತ್ತು. ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡಿದ್ದ ರಾಮಚಂದ್ರ ಸಿಂಹಾಸನವನ್ನು ಏರುವದಕ್ಕೆ ಈಗ ಅನಾಯಾಸವಾಗಿಯೇ ಪೀಡೆ ತೊಲಗಿತಲ್ಲ, ಎಂದು ಆತನಿಗೆ ಆನಂದವೇ ಆಗಿತ್ತು. ಆ ಆನಂದದಲ್ಲಿಯೇ ತನ್ನಷ್ಟಕ್ಕೆ ತಾನೇ ಗುಣಿಗುಣಿಸುತ್ತಿದ್ದ.

ವಾದ್ಯಗಳು ಮೊಳಗುತ್ತಿದ್ದುವು! ಗುರುಗಳು ಆಗಮಿಸಿದರು. ನಾನು ಸಿಂಹಾಸನವನ್ನು ಏರಿದೆ. ಮಂಗಲತೀರ್ಥದಿಂದ ತುಂಬಿದ ಸುವರ್ಣ ಕಲಶಗಳಿಂದ ನನಗೆ ಅಭಿಷೇಕ ಮಾಡಿದರು. ಇಷ್ಟಾಗುತ್ತಿರುವಾಗ ಮಹಾರಾಜರು ನನ್ನನ್ನು ಕೆಳಗೆ ಇಳಿಯ ಹೇಳಿದರು. ನಾನು ಮರುಮಾತಿಲ್ಲದೆ ಕೆಳಗೆ ಬಂದೆ. ನನ್ನ ಮನೋಧೈರ್ಯವನ್ನು ಕಂಡು ಜನ ಬೆರಗಾದರು. ಇದರಲ್ಲೇನು ಮಹಾ? ಮಗನಾದವನು ತಂದೆಯ ವಾಕ್ಯವನ್ನು ಪರಿಪಾಲಿಸುವುದರಲ್ಲಿ ಆಶ್ಚರ್ಯಪಡತಕ್ಕದ್ದೇನಿದೆ?

ಮಗನೇ ರಾಜ್ಯಾಭಿಷೇಕ ಇಷ್ಟಕ್ಕೇ ಸಾಕು, ಎಂದು ತಂದೆ ಹೇಳಿದರು. ನನ್ನ ಭಾರ ಹಗುರಾಯಿತಲ್ಲ, ಎಂದು ನೆಮ್ಮದಿಯ

ಉಸಿರು ಬಿಟ್ಟೆ. ದೇವರ ದಯೆಯಿಂದ ನಾನು ರಾಮನೇ ಆದೆ; ಮಹಾರಾಜರು ಮಹಾರಾಜರಾಗಿಯೇ ಉಳಿದರು. ಇನ್ನು ಸೀತೆಯನ್ನು ಕಾಣಬೇಕು.... !

ಅವದಾತಿಕೆ ರಾಮಚಂದ್ರನ ಬರುವನ್ನು ನೋಡಿದಳು— ದೇವಿಯವರೇ, ರಾಮಭದ್ರರು ಇತ್ತಲೇ ಬರುತ್ತಿದ್ದಾರೆ. ನೀವಿನ್ನೂ ನಾರುಬಟ್ಟೆಗಳನ್ನು ಬಿಡಲಿಲ್ಲವಲ್ಲ ?

ರಾಮ ತೀರಾ ಸಮೀಪಕ್ಕೆ ಬಂದ; ಸೀತೆಯನ್ನು ತನ್ನ ಹತ್ತಿರ ಕುಳ್ಳಿರಿಸಿಕೊಂಡ. ಆತನ ಮೈಮೇಲೆ ಮೊದಲಿನ ಸಾದಾ ಬಟ್ಟೆ-ಭೂಷಣಗಳೇ ಇದ್ದುವು. ಬಹುಶಃ ಪಟ್ಟಾಭಿಷೇಕದ ಸುದ್ದಿ ಸುಳ್ಳಾಗಿರಬೇಕೆನಿಸಿತು— ಅವರಿಗೆ. ಸೀತಾದೇವಿ ಅದನ್ನು ಆಡಿಯೂ ತೋರಿಸಿದಳು.

ರಾಮಚಂದ್ರ ಪಟ್ಟಾಭಿಷೇಕದ ಎಲ್ಲ ವಿವರಗಳನ್ನೂ ತಿಳಿಸಿದ; ದಶರಥ ಮಹಾರಾಜರು ವಾನಪ್ರಸ್ಥದ ಸಿದ್ಧತೆ ನಡೆಸಿದರು. ಆ ಮೊದಲು ನನಗೆ ಪಟ್ಟಕಟ್ಟುವುದನ್ನು ಗೊತ್ತುಮಾಡಿಕೊಂಡರು. ಆದಕ್ಕೆ ವಸಿಷ್ಠ ಗುರುಗಳೂ ಸುಮಂತ ಮಂತ್ರಿಗಳೂ ಪುರ ಜನರೂ ಒಪ್ಪಿಗೆ ಕೊಟ್ಟರು. ಪಟ್ಟಾಭಿಷೇಕ ಆರಂಭವಾಯಿತು. ಶತ್ರುಘ್ನ ಲಕ್ಷ್ಮಣರು ಅಭಿಷೇಕದ ಕುಂಭಗಳನ್ನು ಹಿಡಿದಿದ್ದರು. ತಂದೆಯವರು ಆನಂದಾಶ್ರುಗಳನ್ನು ಸುರಿಸುತ್ತ ಛತ್ರವನ್ನು ಎತ್ತಿದರು. ಅಷ್ಟರಲ್ಲಿ ಮಂಥರಾ ದಾಸಿ ಓಡೋಡುತ್ತ ಬಂದಳು; ಅರಸರ ಕಿವಿಯಲ್ಲಿ ಏನನ್ನೋ ಹೇಳಿದಳು. ಮಹಾರಾಜರು ಖಿನ್ನರಾಗಿ ಹೇಳಿದರು— ರಾಮಚಂದ್ರಾ ನಿನಗೆ ರಾಜಪದವಿಯಿಲ್ಲ.... ?

“ ಆನಂದವೇ ಆಯಿತಲ್ಲವೇ ? ಮಹಾರಾಜರು ಮಹಾರಾಜರಾಗಿಯೇ ಉಳಿದರು; ಆರ್ಯಪುತ್ರರು ಆರ್ಯಪುತ್ರರಾಗಿಯೇ ಉಳಿದರು. ” ಸೀತಾದೇವಿ ಆನಂದವನ್ನು ಪ್ರಕಟಿಸಿದಳು.

“ ಮೈಥಿಲಿ, ಇದೇನು ? ಮೈಮೇಲಿನ ಆಭರಣಗಳನ್ನು ಏಕೆ ತೆಗೆದೆ ? ಓಹೋ ಈಗಲೀಗ ತೆಗೆದಂತೆ ತೋರುತ್ತಿದೆ. ಆಭರಣ

ಗಳನ್ನು ಧರಿಸು. ನಾನು ಕನ್ನಡಿಯನ್ನು ಹಿಡಿಯುವೆ. ಸೀತೇ, ನೀನು ನಾರುಮಡಿಗಳನ್ನು ಉಟ್ಟಂತೆ ಕಾಣುತ್ತಿದೆ. ಆದರೆ ಇದೇನು ಸೂರ್ಯರಶ್ಮಿಗಳೋ ಎನಿಸುತ್ತಿದೆ. ಈ ಬಟ್ಟೆಗಳನ್ನು ಕೇವಲ ವಿನೋದ ಕ್ಕಾಗಿ ಧರಿಸಿರುವೆಯೋ, ಅಥವಾ ಸಾಧನೆ ಮಾಡುತ್ತಿರುವೆಯೋ? "

ರಾಮನ ಮಾತಿನಲ್ಲಿ ವಿನೋದವೂ ಇತ್ತು; ಭವಿಷ್ಯತ್ ಸೂಚ ನೆಯೂ ಇತ್ತು.

" ಇಕ್ಷ್ವಾಕು ಅರಸರು ಮುಪ್ಪಿನ ಕಾಲದಲ್ಲಿ ಈ ಬಟ್ಟೆಗಳನ್ನು ಧರಿಸಲೇಬೇಕಾಗುವುದು. ಇವುಗಳನ್ನು ಕಂಡರೆ ನನಗೂ ಅಚ್ಚು ಮೆಚ್ಚು. ಇತ್ತ ಕೊಡು, ನಾನೂ ಕೆಲಹೊತ್ತು ಧರಿಸಿಕೊಳ್ಳುತ್ತೇನೆ. " ರಾಮಚಂದ್ರ ಮತ್ತೆ ವಿನೋದಮಾಡಿದ.

ಅಷ್ಟಕ್ಕೇ ಸೀತೆಯ ಎದೆ ಧಸ್ ಎಂದಿತು. ರಾಜ್ಯಾಭಿಷೇಕ ನಿಂತದ್ದೇ ದೊಡ್ಡ ಅಮಂಗಳವೆನಿಸಿತ್ತು. ಈಗ ಸಂನ್ಯಾಸಿಯ ಬಟ್ಟೆ ಗಳನ್ನು ಬೇಡುತ್ತಿದ್ದಾನೆ. " ಬೇಡ, ಬೇಡ; ಇಂತಹ ಅಮಂಗಲ ಮಾತನಾಡಬೇಡಿರಿ. " ದುಃಖಿತಳಾಗಿ ನುಡಿದಳು ಸೀತಾದೇವಿ.

" ಹೋಗಲಿ ಬಿಡು. ನೀನು ನನ್ನ ಅರ್ಧಾಂಗವಲ್ಲವೇ? ನೀನು ಅವುಗಳನ್ನು ಉಟ್ಟುಕೊಂಡ ಮೇಲೆ ನನಗೂ ಅರ್ಧ ಮುಟ್ಟಿದಂತಾ ಯಿತು. " ರಾಮ ಮತ್ತೆ ನಗೆಯಾಡಿದ.

ಆ ಹೊತ್ತಿಗೆ ಅಯ್ಯೋ! ಅಯ್ಯೋ! ಮಹಾರಾಜರು! ಘಾತ ವಾಯಿತು, ಘಾತವಾಯಿತು! ಎಂಬ ಕೋಲಾಹಲ ಕೇಳಿ ಬರ ಹತ್ತಿತು.

" ನರನಾರಿಯರು ಇಷ್ಟೇಕೆ ಚೀರಾಡುತ್ತಿದ್ದಾರೆ? ಮಹಾ ರಾಜರು ದೈವದ ಆಘಾತಕ್ಕೆ ಒಳಗಾದರೇ? " ರಾಮಚಂದ್ರ ಎದೆ ಯೊಡೆದು ದನಿಯನ್ನು ಕೇಳಹತ್ತಿದ.

ಆಗ ಕಂಚುಕೀಯ ಉಸಿರಿಲ್ಲದೆ ಓಡುತ್ತ ಬಂದ. ಯುವ ರಾಜರೇ, ಮಹಾರಾಜರನ್ನು ಕಾಪಾಡಿರಿ, ಕಾಪಾಡಿರಿ! ಎಂದು ಗೋಳಿಟ್ಟ.

ರಾಮಚಂದ್ರನಿಗೆ ಈ ಗೋಳಾಟದ ಕಾರಣ ತಿಳಿಯದು. ಕಂಚುಕಿಯನ್ನೇ ಪ್ರಶ್ನಮಾಡಿದ– ಈ ಗೋಳಾಟಕ್ಕೆ ಕಾರಣವೇನು ?

" ಇದಕ್ಕೆಲ್ಲ ಕೈಕೇಯಿ ದೇವಿಯೇ ಕಾರಣ ! " ಕಂಚುಕಿ ತಿರಸ್ಕಾರದಿಂದ ನುಡಿದ.

" ಹಾಗಿದ್ದರೆ, ಭವಿಷ್ಯತ್ತಿನಲ್ಲಿ ಇದರಿಂದ ನಮ್ಮ ಕಲ್ಯಾಣವೇ ಆಗಬೇಕು. ಇಂದ್ರನಂತಿರುವ ಪತಿದೇವ, ನನ್ನಂತಹ ಮಗ ಇರುವಾಗ, ನನ್ನ ತಾಯಿಗೆ ಯಾವ ಕೊರತೆಯಿದೆ ? ಅವಳೇಕೆ ಅನ್ಯಾಯವನ್ನು ಆಶಿಸಬಹುದು ? " ರಾಮ ತನ್ನ ಸರಳಬುದ್ಧಿಯಿಂದಲೇ ಆ ಪ್ರಸಂಗವನ್ನು ಅಳೆದ.

" ಹಾಗಲ್ಲ ಯುವರಾಜರೇ; ಸ್ವಭಾವವಾಗಿಯೇ ಕ್ಷುದ್ರವಾದ ಸ್ತ್ರೀ ಬುದ್ಧಿಯಲ್ಲಿ ನಿಮ್ಮ ನಿಷ್ಕಪಟ ಹೃದಯದ ಸರಳತನವನ್ನು ಆರೋಪಿಸಬೇಡಿರಿ. ಆಕೆ ತಡೆದದ್ದರಿಂದಲೇ ನಿಮ್ಮ ರಾಜ್ಯಾಭಿಷೇಕ ನಿಂತು ಹೋಯಿತು. ಈಗ ಅವರು ಭರತನಿಗೇ ಪಟ್ಟಕಟ್ಟಬೇಕೆಂದು ಹಟ ಹಿಡಿದಿದ್ದಾರೆ. ಮದುವೆಯ ಮುನ್ನ ಮಹಾರಾಜರೇನೋ ವಚನ ಕೊಟ್ಟಿದ್ದರಂತೆ. ಅದನ್ನೇ ಸಮಯದಲ್ಲಿ ಕೇಳಿ ಹಟವನ್ನು ಹಿಡಿಯಬೇಕೇ ? ಇದು ಸರಳತನವೇ ? ಸ್ತ್ರೀಯರ ದುರ್ಬುದ್ಧಿಯಲ್ಲವೇ ಇದು.... ? ಕಾಂಚುಕೀಯ ಇನ್ನೂ ಕೈಕೇಯಿಯನ್ನು ಹಳಿಯುವವನಿದ್ದ. ರಾಮಚಂದ್ರ ಅಷ್ಟಕ್ಕೇ ಆತನನ್ನು ತಡೆದ; ಕಂಚುಕೀ, ನನ್ನ ಮಾತೃದೇವತೆಯ ತಿರಸ್ಕಾರವನ್ನು ಇಲ್ಲಿಗೇ ನಿಲ್ಲಿಸು. ತಂದೆಯವರ ಸ್ಥಿತಿಗತಿಗಳನ್ನು ಮಾತ್ರ ಹೇಳು " ಎಂದ.

" ರಾಣಿಯ ಕಟು ನುಡಿಗಳನ್ನು ಕೇಳುತ್ತಲೇ ಮಹಾರಾಜರು ಮೂಕರಾಗಿಬಿಟ್ಟರು. ಈ ವಿಷಯವನ್ನು ನಿಮಗೆ ತಿಳಿಸಬೇಕೆಂದು ನನಗೆ ಕೈಸನ್ನೆಯಿಂದ ತಿಳಿಸಿದರು; ಹಾಗೆಯೇ ಮೂರ್ಛಿತರಾದರು ! ಎಚ್ಚರವಾಗಿರುವುದಕ್ಕಿಂತ ಮೈಮರೆಯುವುದೇ ಒಳಿತೆಂದು ಕಂಡರೋ ಏನೋ !

ಮಹಾರಾಜರು ಮೂರ್ಛೆಹೊಂದಿದ ಸುದ್ದಿ ಲಕ್ಷ್ಮಣನಿಗೂ ತಿಳಿ

ದಿತ್ತು. ಅವನು ಕಣ್ಣುಗಳಿಂದ ಕಿಡಿಗಳನ್ನು ಉದಿರಿಸುತ್ತ ಬಿಲ್ಲು ಬಾಣಗಳನ್ನು ಹಿಡಿದುಕೊಂಡೇ ಬಂದ. ಈ ಸಮಯದಲ್ಲಿ ಅಪರಾಧಿಗೆ ದಯಾದಾಕ್ಷಿಣ್ಯವನ್ನು ತೋರಿಸಬೇಕಾಗಿಲ್ಲ; ದೇಹಾಂತ ಶಿಕ್ಷೆಯನ್ನೇ ಕೊಡಬೇಕು- ಎಂದು ಅವನ ಅಭಿಪ್ರಾಯವಾಗಿತ್ತು.

ಆದರೆ ರಾಮಚಂದ್ರ ಹಿಂಸಾವಿಚಾರವನ್ನು ಒಪ್ಪತಕ್ಕವನಲ್ಲ. ಲಕ್ಷ್ಮಣನನ್ನು ಸಂತಯಿಸಲು ಯತ್ನಿಸಿದ. ಆದರೆ ಲಕ್ಷ್ಮಣ:

ರಾಮಚಂದ್ರಾ, ಮಹಾರಾಜರು ಮೂರ್ಛಿತರಾದುದನ್ನು ನೋಡಿಯೂ ನಿನಗೆ ಕೆಡುಕೆನಿಸುವದಿಲ್ಲವೇ? ಇದು ಅಪರಾಧಿಗಳಿಗೆ ದಯೆತೋರಿಸುವ ಸಮಯವಲ್ಲ. ನಿನ್ನಂಥ ಮಿದುವೆದೆಯವರಿಗೆ ಕೆಡಕು ಕಟ್ಟಿಟ್ಟದ್ದೇ. ಸ್ವಜನರನ್ನು ಹಿಂಸಿಸುವುದು ನಿನಗೆ ಬೇಡವಾಗಿದ್ದರೆ ಬಿಡು. ನಾನು ಮಾತ್ರ, ನಮ್ಮನ್ನು ಪೀಡೆಗೆ ಒಳಪಡಿಸುವ ಯುವತಿಯರೆಲ್ಲರನ್ನೂ ಕೊಂದೇಬಿಡುತ್ತೇನೆ- ಎಂದು ವೀರಾಟೋಪವನ್ನು ಆರಂಭಿಸಿದ.

ಒದಗಿರುವ ದುಃಖದಲ್ಲಿ ಈ ಹಿಂಸಾಚಾರ ಮತ್ತಿಷ್ಟು ಕೆಡುಕು, ಎಂದು ಸೀತೆ ಹೇಳಿದಳು. ರಾಮಚಂದ್ರನೂ ಅದೇ ಜಾಡಿನಲ್ಲಿ ಉಪದೇಶಿಸಿದ.

ಶಾಂತನಾಗು ಲಕ್ಷ್ಮಣಾ! ಭರತನಿಗೆ ಪಟ್ಟವಾದರೇನು ನನಗೆ ಪಟ್ಟವಾದರೇನು! ನಿನಗೆ ಎರಡೂ ಒಂದೇ ಅಲ್ಲವೇ? ಒಂದು ವೇಳೆ ಬಿಲ್ಲನ್ನು ಹಿಡಿಯುವುದೇ ಆದರೆ, ಭರತನ ರಕ್ಷಣೆಗೆ ಧನುರ್ಧಾರಿಯಾಗಿ ನಿಲ್ಲು!

ಲಕ್ಷ್ಮಣ ಇದನ್ನು ಒಪ್ಪಲಿಲ್ಲ. ಮರುಮಾತೆತ್ತದೆ ಹೊರಟು ನಿಂತ. ಆತನನ್ನು ಸಮಾಧಾನ ಮಾಡುವುದಕ್ಕಾಗಿ ರಾಮಚಂದ್ರ ಹೇಳಿದ—

ಶಾಂತನಾಗು ಲಕ್ಷ್ಮಣಾ! ತನ್ನ ಮಾತಿನಂತೆ ನಡೆಯಬೇಕೆನುವ ಮಹಾರಾಜನನ್ನು ಶಿಕ್ಷಿಸಬೇಕೇ? ತನ್ನ ಮದುವೆಯ ಕಾಲಕ್ಕೆ ಪಡೆದ ವಚನದಂತೆ ತನ್ನ ಮಗನಾದ ಭರತನಿಗೆ ರಾಜ್ಯವನ್ನು ಕೇಳಿದ

ತಾಯಿ ಕೈಕೇಯಿಯನ್ನು ಕೊಂದುಹಾಕಲೇ? ಈ ಯಾವ ಪಾಪಕ್ಕೂ ಪಕ್ಕಾಗದ ಭರತನ ಮೇಲೆ ಕೈಮಾಡಲೇ? ಹೇಳು ಪಿತೃವಧೆ, ಮಾತೃವಧೆ ಮತ್ತು ಭ್ರಾತೃವಧೆ ಈ ಮೂರರಲ್ಲಿ ಯಾವ ಪಾಪವನ್ನು ಮಾಡಲಿ?

"ಅಣ್ಣಾ, ನೀನು ನನ್ನ ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನಿನಗೆ ರಾಜ್ಯ ಸಿಕ್ಕಲಿಲ್ಲವಲ್ಲ, ಎಂದು ನನಗೆ ಖೇದವಿಲ್ಲ. ಆದರೆ ನೀನು ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಬೇಕಾಯಿತಲ್ಲ, ಎಂದು ದುಃಖವಾಗುತ್ತಿದೆ." ಲಕ್ಷ್ಮಣ ತನ್ನ ಅಳಲನ್ನು ತೋಡಿಕೊಂಡ.

"ಓಹೋ! ಇಷ್ಟಕ್ಕಾಗಿಯೇ ಮಹಾರಾಜರು ಮೂರ್ಛೆ ಹೋದರೇ? ಉಪಾಯವಿಲ್ಲ. ಅವರು ಈ ರೀತಿ ದುರ್ಬಲತೆಯನ್ನು ತೋರಿಸಬಾರದಾಗಿತ್ತು. ಮೈಥಿಲೀ, ಅವದಾತಿಕೆ ತಂದುಕೊಟ್ಟ ನಾರುಬಟ್ಟೆಗಳನ್ನು ಬೇಗ ಕೊಡು. ಅವುಗಳನ್ನು ಈಗಲೇ ಉಟ್ಟುಕೊಳ್ಳುವೆ. ಹಿಂದೆ ಯಾವ ರಾಜನೂ ವಿಚಾರಿಸಿರಲಾರದ, ಆಚರಣೆಯಲ್ಲಿ ತಂದಿರಲಾರದ ಮಹತ್ಕಾರ್ಯವನ್ನು ಮಾಡಿ ತೋರಿಸುವೆ.

ರಾಮಚಂದ್ರ ನಾರುಮಡಿಗಳನ್ನು ಧರಿಸಿಕೊಂಡ. ಸೀತೆಯೂ ಆತನನ್ನು ಹಿಂಬಾಲಿಸಲು ಸಿದ್ಧಳಾದಳು. ಅವಳ ಮನಸ್ಸನ್ನು ತಿರುಗಿಸಲು ರಾಮಚಂದ್ರ ಲಕ್ಷ್ಮಣನಿಗೆ ಹೇಳಿದ. ಆದರೆ, ಅವನು ಅತ್ತಿಗೆಯ ಅಭಿಪ್ರಾಯವನ್ನೇ ಮತ್ತಿಷ್ಟು ಬೆಂಬಲಿಸಿದ— ಅಣ್ಣಾ, ರಾಹು ನುಂಗಿದ ಕಾಲದಲ್ಲಿಯೂ ರೋಹಿಣಿ ಚಂದ್ರನನ್ನು ಅನುಸರಿಸುತ್ತಾಳೆ. ಕಾಡಿನ ಮರ ಭೂಮಿಗೆ ಬೀಳುತ್ತಿದ್ದರೂ ಅದನ್ನು ಅಪ್ಪಿಕೊಂಡ ಬಳ್ಳಿ ಅದರೊಡನೆಯೇ ಇರುತ್ತದೆ. ಕೆಸರಿನಲ್ಲಿ ಸಿಕ್ಕ ಗಜೇಂದ್ರನನ್ನು ಹೆಣ್ಣಾನೆ ಬಿಟ್ಟು ಹೋಗುವುದಿಲ್ಲ. ಕಾರಣ, ಸೀತಾದೇವಿಯೂ ನಾರೀಧರ್ಮದ ಪವಿತ್ರಾಚರಣೆಯನ್ನು ಮಾಡಲಿ. ಸ್ತ್ರೀಯರಿಗೆ ಪತಿಯೇ ಪರಮ ದೈವತವಲ್ಲವೇ?

ಅಷ್ಟರಲ್ಲಿ ಚೇಟಿ ಮತ್ತೆ ಕೆಲವು ನಾರುಬಟ್ಟೆಗಳನ್ನು ತಂದಳು.

ಅವುಗಳನ್ನು ನೋಡುತ್ತಲೇ ಲಕ್ಷ್ಮಣ— ಅಣ್ಣಾ, ಈ ವರೆಗೂ ವಸ್ತ್ರ ಭೂಷಣ ಮಾಲ್ಯ ಮುಂತಾಗಿ ಯಾವುದರಲ್ಲೂ ನನಗೆ ಪಾಲನ್ನು ಕೊಡುತ್ತಿದ್ದಿ. ಈ ನಾರುಬಟ್ಟೆಗಳಲ್ಲಿ ನನಗೇಕೆ ಪಾಲನ್ನು ಕೊಡುವುದಿಲ್ಲ? ನೀನೊಬ್ಬನೇ ಧರಿಸುವೆಯಾ ?— ಎಂದ.

ಆದರೆ ರಾಮ ಸೀತೆಯರು ಲಕ್ಷ್ಮಣನನ್ನು ತಡೆಹಿಡಿಯಲು ಯತ್ನಿಸಿದರು. ಆದರೆ, ರಾಮಚಂದ್ರನನ್ನು ಅಣ್ಣನಂತೆ, ತಂದೆಯಂತೆ, ಪೂಜ್ಯ ಗುರುವಿನಂತೆ, ದೇವರಂತೆ ತಿಳಿದಿದ್ದ ಲಕ್ಷ್ಮಣ ಅವರ ಉಪದೇಶವನ್ನು ಒಪ್ಪಲಿಲ್ಲ.

" ಅತ್ತಿಗೇ, ನನ್ನ ಗುರುವಿನ ಪಾದಸೇವೆಯನ್ನು ನೀನೊಬ್ಬಳೇ ಮಾಡಬೇಕೆನ್ನುವೆಯಾ ? ಆಗದು. ನೀನು ಬಲಗಾಲನ್ನು ಒತ್ತುತ್ತಿದ್ದರೆ ನಾನು ಎಡಗಾಲನ್ನು ಒತ್ತುವೆ " ಎಂದು ಸೋದರ ಭಕ್ತಿಯನ್ನು ಪ್ರಕಟಿಸಿದ.

ಲಕ್ಷ್ಮಣನೂ ವಲ್ಕಲಗಳನ್ನು ಧರಿಸಿದ. ಮೂವರೂ ವನಕ್ಕೆ ಹೊರಟು ನಿಂತರು. ಈ ಸುದ್ದಿ ಕಾಡು ಬೇಗೆಯಂತೆ ಅಯೋಧ್ಯೆಯಲ್ಲಿ ತಡವಿಲ್ಲದೆ ಹಬ್ಬಿತು. ಅವರ ಕೊನೆಯ ದರ್ಶನವನ್ನು ಪಡೆಯಲು ನಗರದ ನರನಾರಿಯರು ತಂಡ ತಂಡವಾಗಿ ಬಂದರು. ರಾಜಮಾರ್ಗ ಕಟ್ಟಾಗಿ ಹೋಯಿತು. ಲಕ್ಷ್ಮಣ ಅವರನ್ನೆಲ್ಲ ಸರಿಸಲು ಯತ್ನಿಸಿದ, ಸಾಧ್ಯವಾಗಲಿಲ್ಲ. ಸೀತಾದೇವಿ ಮುಖದ ಮುಸುಕನ್ನು ತೆರೆದಳು. ಮೂವರೂ ಪೌರರಿಗೆ ದರ್ಶನಕೊಟ್ಟರು.

ಆ ಹೊತ್ತಿಗೆ ಕಂಚುಕಿ ಬಂದ; ಕೊನೆಯ ದರ್ಶನಕ್ಕೆ ಬರುತ್ತಿದ್ದಾರೆ, ಎಂದು ಹೇಳಿದ. ಆದರೆ ಲಕ್ಷ್ಮಣ— ಅಣ್ಣಾ, ವಲ್ಕಲವನ್ನು ಧರಿಸಿರುವ ನಮ್ಮನ್ನು ನೋಡಿ ಚಿಂತೆಯ ಕಡಲಲ್ಲಿ ಮುಳುಗಿಬಿಟ್ಟಾರು. ನಾವು ಹೊರಟು ಹೋಗೋಣ. ಆಮೇಲೆ ತಾವಾಗಿಯೇ ಅರಮನೆಗೆ ತೆರಳುತ್ತಾರೆ— ಎಂದು ಸಲಹೆ ಕೊಟ್ಟ.

ಆ ಕೂಡಲೆ ಮೂವರು ಕಾಡಿನ ದಾರಿಯನ್ನು ಹಿಡಿದರು.

ರಾಮಲಕ್ಷ್ಮಣರು ಕಾಡಿಗೆ ಹೋದರು. ಅಯೋಧ್ಯಾನಗರ

ದಲ್ಲಿ ಅವಲಕ್ಷಣಗಳು ತೋರತೊಡಗಿದುವು. ಮಹಾರಾಜ ದಶರಥ ಕಣ್ಣೀರು ಕರೆಯಹತ್ತಿದ. ಆತನ ಮತಿಗೆ ಮಂಕು ಹಿಡಿದಂತಾಯಿತು. ಹಾ ರಾಮ, ಸೀತೇ, ಲಕ್ಷ್ಮಣಾ ಎಂದು ಮೈಮರೆವಿನಲ್ಲಿಯೇ ಮಾತಾಡುತ್ತಿದ್ದ. ಇಷ್ಟೇ ಅಲ್ಲ, ಆನೆಗಳು ಮೇವನ್ನು ಬಿಟ್ಟವು; ಕುದುರೆಗಳು ಕೆನೆಯುವದನ್ನು ನಿಲ್ಲಿಸಿದವು; ನಗರವಾಸಿಗಳಾದ ಮುದುಕರು, ಹರಯದವರು, ಹುಡುಗರು ಹೆಣ್ಣು ಮಕ್ಕಳು ಆಹಾರ ನಿದ್ರೆಗಳನ್ನು ತೊರೆದರು, ರಾಮಾ ರಾಮಾ ಎಂದು ಗೋಳಾಡತೊಡ ಗಿದವು. ರಾಮಲಕ್ಷ್ಮಣರು ಹೋದ ಕಾಡಿನ ಕಡೆಗೇ ಎಲ್ಲರೂ ನಿಟ್ಟಿಸಿ ನೋಡುತ್ತಿದ್ದರು.

ಕ್ಷಣಕ್ಷಣಕ್ಕೆ ದಶರಥ ಮಹಾರಾಜನ ಅವಸ್ಥೆ ಚಿಂತಾಜನಕ ವಾಗುತ್ತಿತ್ತು. ನಯನಾಭಿರಾಮನಾದ ರಾಮಚಂದ್ರ, ಸಲಕ್ಷಣ ದೇಹದ ಲಕ್ಷ್ಮಣಾ, ಸಾಧ್ವಿ ಸೀತಾದೇವೀ ಎಲ್ಲಿದ್ದೀರಿ? ಮಾತ ನಾಡುವದಿಲ್ಲವೇ? ಧರ್ಮಪಾಲನಕ್ಕಾಗಿ ಈ ವೃದ್ಧ ತಂದೆಯನ್ನು ತೊರೆದು ಹೋದಿರಾ? ಸೂರ್ಯಅಸ್ತವಾದಂತೆ ರಾಮಚಂದ್ರ ಹೋದ; ರವಿ ಕಾಣದಾಗುತ್ತಲೇ ಕಣ್ಮರೆಯಾಗುವ ಹಗಲಿನಂತೆ ಲಕ್ಷ್ಮಣ ಕಾಣದಾದ; ಅವರಿಬ್ಬರೂ ಹೋದಮೇಲೆ ನೆರಳು ಅಡಗು ವಂತೆ ಸೀತಾದೇವಿಯೂ ತೋರದಾದಳು! ಅಯ್ಯೋ, ದುರ್ವಿ ಧಿಯೇ! ನಾನೇಕೆ ನಿಪುತ್ರಿಕನಾಗಲಿಲ್ಲ! ರಾಮನಾದರೂ ಬೇರೆ ದೊರೆಗಳ ಹೊಟ್ಟೆಯಲ್ಲಿ ಏಕೆ ಹುಟ್ಟಲಿಲ್ಲ! ಕೈಕೇಯಿ ಕಾಡಿನ ಹುಲಿಯಾಗಿ ಹುಟ್ಟಲಿಲ್ಲವೇಕೆ? ಈ ಮೂರೂ ನಡೆದಿದ್ದರೆ ತಪ್ಪೇ ನಾಗುತ್ತಿತ್ತು?

ಅರಸನ ಆಲಾಪವನ್ನು ನೋಡಿ ಕೌಸಲ್ಯಾದೇವಿ ತಳಮಳಿಸಿ ದಳು. ಮಹಾರಾಜರೇ, ಅತ್ತು ಅತ್ತು ಕೊರಗಬೇಡಿರಿ. ದಿವಸ ಮುಗಿಯುತ್ತಲೇ ಅವರೆಲ್ಲ ತಿರುಗಿ ಬರುತ್ತಾರೆ. ಕಣ್ತುಂಬ ನೋಡುವಿ ರಂತೆ. ಈಗ ಸಮಾಧಾನವಾಗಿರಿ.

ಆದರೆ ಮೈಮೇಲೆ ಪೂರಾ ಎಚ್ಚರವಿರಲಿಲ್ಲ. ತನ್ನೊಡನೆ

ಯಾರು ಮಾತಾಡಿದರು, ಇದೂ ಅವನಿಗೆ ತಿಳಿಯಲಿಲ್ಲ. ನೀನು ಯಾರು, ಎಂದು ಕೇಳಿಯೇ ಬಿಟ್ಟ.

" ನಾನು ಕೌಸಲ್ಯ; ಬೇಡವಾದ ಆ ಮಗನನ್ನು ಹಡೆದ ತಾಯಿ. "

ಓಹೋ! ಸರ್ವರಿಗೂ ಸಂತೋಷಕಾರಕನಾದ ರಾಮಚಂದ್ರನನ್ನು ಹೆತ್ತ ತಾಯಿಯಲ್ಲವೇ ನೀನು ? " ದಶರಥ ಆಕೆಯನ್ನು ಗೌರವಿಸಿ ನುಡಿದ. ಅಷ್ಟರಲ್ಲಿಯೇ ಮೈಮರೆತು ಮಾತನಾಡಿದ—
" ನಿನ್ನ ನೆರೆಯಲ್ಲಿರುವ ಈ ಹೆಂಗಸು ಯಾರು ? "

" ನಿಮ್ಮ ಕುಮಾರ ಲಕ್ಷ್ಮಣ.... "

ಕೌಸಲ್ಯ ಏನು ಹೇಳುತ್ತಿದ್ದಳೋ ! 'ಲಕ್ಷ್ಮಣ' ಹೆಸರನ್ನು ಕೇಳುತ್ತಲೇ ದಶರಥ ಹೃದಯ ಹಾತೊರೆಯಿತು. ಎಲ್ಲಿ ಎಲ್ಲಿ ಲಕ್ಷ್ಮಣ ! ಕಾಣುವದಿಲ್ಲವಲ್ಲ ! ಅಯ್ಯೋ ದೈವವೇ !— ಎನ್ನುತ್ತ ಕಣ್ಣೀರು ಸುರಿಸತೊಡಗಿದ.

"ಲಕ್ಷ್ಮಣನ ತಾಯಿ ಸುಮಿತ್ರೆ ಎಂದು ಹೇಳುವವಳಿದ್ದೆ. ಮಹಾರಾಜರು ಮಧ್ಯದಲ್ಲಿಯೇ ಮೂರ್ಛೆ ಹೋದಿರಿ" ಕೌಸಲ್ಯ ನುಡಿದಳು.

" ಸುಮಿತ್ರೇ, ನೀನೇ ಧನ್ಯ ! ನಿನ್ನ ಪುತ್ರನೇ ಧನ್ಯ ! ಆತ ರಘುಕುಲಶ್ರೇಷ್ಠನಾದ ರಾಮಚಂದ್ರನನ್ನು ನೆರಳಿನಂತೆ ಯಾವಾಗಲೂ ಅನುಸರಿಸುತ್ತಾನೆ; ಆ ಪುಣ್ಯ ಮೂರ್ತಿಯನ್ನು ನಿತ್ಯವೂ ನೋಡುತ್ತಾನೆ...."

ದಶರಥನ ಮಾತು ನಡೆದಿರುವಾಗ ಕಂಚುಕಿ ಬಂದ; ಸುಮಂತ ಮಂತ್ರಿಗಳು ಬಂದಿರುವುದಾಗಿ ನಿವೇದಿಸಿದ. ಮಂತ್ರಿಯೊಡನೆ ರಾಮ ಬಂದಿರಲಿಲ್ಲ; ಬರಿಯ ರಥ ತಿರುಗಿ ಬಂದಿತ್ತು. ಇದು ತಿಳಿಯುತ್ತಲೇ ಅರಸು ಮತ್ತೆ ಮೂರ್ಛೆಹೋದ. ಅರಸನ ದುರವಸ್ಥೆಯನ್ನು ಕಂಡು ಕಂಚುಕಿ ತನ್ನೊಳಗೇ ನುಡಿದ– ಇಂತಹ ಮಹಾಪುರುಷರೂ ಆಪತ್ತಿಗೆ ಒಳಗಾಗುತ್ತಾರಲ್ಲವೇ ? ವಿಧಿಯನ್ನು ಮೀರುವುದು ಯಾರಿಗೂ ಶಕ್ಯವಿಲ್ಲ. ಮಹಾರಾಜರೇ, ಶಾಂತರಾಗಿರಿ, ಶಾಂತರಾಗಿರಿ.

ಮಹಾರಾಜರ ದುಃಖದ ದನಿ ಸುಮಂತನಿಗೂ ಕಳವಳವನ್ನು

ಹುಟ್ಟಿಸಿತು. ಆತನ ಜೀವ ತಡೆಯುಲಿಲ್ಲ. ಒಳಗೆ ಬಂದು ಬಿಟ್ಟ. ಆತನನ್ನು ಕಂಡು ದಶರಥನ ದುಃಖ ಕಟ್ಟೊಡೆದು ಹರಿಯಿತು.

"ಮಂತ್ರಿಗಳೇ, ಆ ನನ್ನ ಮುದ್ದು ಮಕ್ಕಳು ಅಕ್ಕರೆಯ ಸೊಸೆ ಪ್ರಜೆಗಳಿಗಾಗಲಿ ಸಾವಿನ ದವಡೆಯಲ್ಲಿ ಸಿಕ್ಕಿರುವ ನನಗಾಗಲಿ ಏನಾದರೂ ಶೋಕಸಂದೇಶವನ್ನು ಕಳಿಸಿರುವರೇ ?" ಎಂದು ಕೇಳಿದ.

"ಶಾಂತರಾಗಿರಿ ಮಹಾರಾಜರೇ ! ಅಮಂಗಲವನ್ನು ಆಡಿಕೊಳ್ಳಬೇಡಿರಿ. ಅವರೆಲ್ಲ ಕ್ಷೇಮದಿಂದಲೇ ಇದ್ದಾರೆ." ಸುಮಂತ ಹೇಳಿದ.

ಮಕ್ಕಳ ಕ್ಷೇಮವಾರ್ತೆ ದಶರಥನಿಗೆ ಎಚ್ಚರಿಕೆಯನ್ನು ತಂದಿತು. ಆತ ಮಂತ್ರಿಯ ಬಾಯಿಂದ ಮತ್ತೆ ಮತ್ತೆ ಅವರ ಹೆಸರನ್ನು ಕೇಳಿದ; ಕೇಳಿಯೇ ಕೇಳಿದ; ಬೇಸರವಿಲ್ಲದೆ ಕೇಳಿದ. ಹಾಗೆಯೇ, ಅವರ ವನವಾಸದ ವಿವರವನ್ನು ತಿಳಿಯಬಯಸಿದ.

"**ಶೃಂಗವೇರ**ಪುರದಲ್ಲಿ ಶ್ರೀರಾಮಚಂದ್ರ, ಸೀತಾದೇವಿ ಮತ್ತು ಲಕ್ಷ್ಮಣದೇವರು ರಥದಿಂದ ಇಳಿದರು. ಬಳಿಕ ಅಯೋಧ್ಯೆಗೆ ಅಭಿಮುಖರಾಗಿ ನಿಂತರು. ಪೂಜ್ಯ ಪಿತೃವಿನ ಹೆಸರನ್ನು ಹಿಡಿದು ಎಲ್ಲರೂ ಭಕ್ತಿಯಿಂದ ತಲೆಬಾಗಿಸಿದರು. ಆ ಮೇಲೆ, ಏನನ್ನೋ ಹೇಳಬೇಕೆಂದು ಎಷ್ಟೋ ಪ್ರಯತ್ನಿಸಿದರು. ತುಟಿಗಳು ನಡುಗುತ್ತಿದ್ದುವು, ಆದರೆ ದುಃಖವೊತ್ತರಿಸಿ ಕುತ್ತಿಗೆ ಬಿಗಿದುಬಂದುವು. ಯಾರೂ ಏನನ್ನೂ ಮಾತನಾಡಲೇ ಇಲ್ಲ. ಮೌನವಾಗಿ ವನಕ್ಕೆ ತೆರಳಿದರು !

ಸುಮಂತನ ಮಾತು ಮುಗಿಯಿತು. ಹಾಃ ! ಎನ್ನುತ್ತ ದಶರಥ ದೊರೆ ಭೂಮಿಗೆ ಒರಗಿಬಿಟ್ಟ. ಪರಿವಾರದವರೂ ಉಳಿದವರೂ ಆತನಿಗೆ ಶೈತ್ಯೋಪಚಾರ ಮಾಡಿದರು. ಮಹಾರಾಜನಿಗೆ ತುಸು ಅರಿವು ಬಂದಿತು.

"ಕೌಸಲ್ಯೆ, ಕಣ್ಣು ಕಾಣದಾಗಿವೆ. ನನ್ನ ಮೈಮೇಲೆ ನಿನ್ನ ಅಮೃತ ಹಸ್ತವನ್ನು ಆಡಿಸು. ನನ್ನ ಬುದ್ಧಿಯಂತೂ ರಾಮಚಂದ್ರನ ಬೆನ್ನಹಿಂದೆಯೇ ಹೋಗಿಬಿಟ್ಟಿದೆ. ಹಾ, ಮಗನೇ, ರಾಮಾಃ !

ನಿನ್ನನ್ನು ಪಟ್ಟದ ಮೇಲೆ ಕುಳ್ಳಿರಿಸಬೇಕು, ಪ್ರಜೆಗಳಿಗೆ ಧರ್ಮಪ್ರಭು ವನ್ನು ಒದಗಿಸಬೇಕು; ಮತ್ತು ನಿನ್ನ ತಮ್ಮಂದಿರನ್ನು ನಿನ್ನಂತೆಯೇ ವೈಭವಪೂರ್ಣವಾಗಿ ಇರಿಸಬೇಕು.... ಮುಂತಾಗಿ ನಿನಗೆ ಹೇಳಿ ನಾನು ವನಕ್ಕೆ ತೆರಳಬೇಕು, ಎಂದು ಇದ್ದೆ. ಆದರೆ ದುಷ್ಟಳಾದ ಕೈಕೇಯಿ ಕ್ಷಣಾರ್ಧದಲ್ಲಿ ಇದನ್ನೆಲ್ಲ ಹಾಳು ಮಾಡಿಬಿಟ್ಟಳು. !" ಮಹಾರಾಜ ಮಾತನ್ನು ಮುಂದುವರಿಸಿ ಸುಮಂತನಿಗೆ ಹೇಳಿದ– ಮಂತ್ರಿಗಳೆ, ಕೈಕೇ ಯಿಗೆ ಹೇಳಿರಿ: ರಾಮ ವನಕ್ಕೆ ಹೋದ. ಇನ್ನು ನೀನು ಮನಸ್ಸಿಗೆ ಬಂದಂತೆ ಸುಖವಾಗಿರು. ನಾನು ಈ ಜಗತ್ತನ್ನು ಬಿಟ್ಟು ಹೋಗು ತ್ತಿದ್ದೇನೆ. ನಿನ್ನ ಮಗನನ್ನು ಬೇಗನೆ ಕರೆಸಿಕೋ. ಏನೆಲ್ಲವನ್ನೂ ಮಾಡು. ಬೇಗನೆ ನಿನ್ನ ಪಾಪದ ಪಾತ್ರೆ ಪೂರ್ಣವಾಗಲಿ."

ಹೇಳ ಹೇಳುತ್ತ ದಶರಥ ಮಹಾರಾಜ ಮೇಲಕ್ಕೆ ನೋಡಿದ. ಆತನಿಗೆ ತನ್ನ ಪಿತೃಪೂರ್ವಜರಾದ ರಘುಕುಲದ ದೊರೆಗಳು ಕಂಡಂತಾ ಯಿತು. ಬೇಗನೆ ನೀರನ್ನು ತರಿಸಿಕೊಂಡ; ಈತ ಇಂದ್ರಸಖನಾದ ದಿಲೀಪ; ಈತ ಮಹಾರಾಜ ರಘು; ಈತ ನನ್ನ ಪೂಜ್ಯ ತಾತ ಅಜ ಮಹಾರಾಜ.... ಇವರ ಹೆಸರನ್ನು ಹೇಳುತ್ತ ಅರ್ಘ್ಯವನ್ನು ಕೊಟ್ಟ.

ಮಹಾರಾಜನ ದೃಷ್ಟಿ ಮತ್ತೆ ಕೆಳಕ್ಕೆ ತಿರುಗಲೇ ಇಲ್ಲ. ಪಿತೃ ಗಳೇ, ನನಗಾಗಿ ಕಾಯುತ್ತಿದ್ದೀರಾ? ನಿಮ್ಮೊಡನೆಯೇ ಇರುವುದಕ್ಕೆ– ಇಗೋ ಬಂದೆ ಬಂದೆ, ಎನ್ನುತ್ತ ಮೈಮರೆತು ಮಲಗಿಬಿಟ್ಟ ದಶರಥ ಮಹಾರಾಜ! ಬಾಯಿಂದ ಹಾ! ರಾಮಾಽಽ ಲಕ್ಷ್ಮಣಾಽಽ ಸೀತೇಽಽ ಎಂಬ ಹೆಸರುಗಳು ಮುಸುಮುಸುಕಾಗಿ ಹೊರಬಂದುವು.

ಅರಮನೆಯಲ್ಲಿ ಒಮ್ಮೆಲೆ ಹಾ ಹಾ ಕಾರದ ದನಿ ಎದ್ದಿತು. ಅರಸನನ್ನು ಎಚ್ಚರಿಸಲು ಉಪಚಾರ ಮಾಡಿದರು. ಆದರೆ, ಮಹಾ ರಾಜರು ಸ್ವರ್ಗದ ಮಧ್ಯಮಾರ್ಗದಲ್ಲಿ ನಡೆದುಬಿಟ್ಟದ್ದರು?

ಅಯೋಧ್ಯೆಯ ಹೊರಗೆ ಭವ್ಯ ಮಂದಿರವಿತ್ತು. ಅದರಲ್ಲಿ ರಘುಕುಲದ ಮೃತಮಹಾರಾಜರ ದಿವ್ಯ ಶಿಲಾವಿಗ್ರಹಗಳನ್ನು ಇರಿಸಿ ದ್ದರು. ನಿತ್ಯವೂ ಅವುಗಳಿಗೆ ಪೂಜೆ ನಡೆಯುತ್ತಿತ್ತು. ದಶರಥ

ಮಹಾರಾಜನ ಶಿಲಾಪುತ್ಥಳಿಯನ್ನು ಅದೇ ಮಂದಿರದಲ್ಲಿ ಸ್ಥಾಪಿಸಲಾಯಿತು.

ಅಯೋಧ್ಯೆಯ ಈ ದುರಾಂತಗಳಾವುವೂ ಭರತನಿಗೆ ತಿಳಿದಿರಲಿಲ್ಲ. ಆತ ಮೊದಲಿನಿಂದಲೂ ಕೇಕಯದ ಅಜ್ಜನ ಮನೆಯಲ್ಲಿಯೇ ಇರುತ್ತಿದ್ದ. ಆತನನ್ನು ಕರೆಯಲು ಸಾರಥಿ ರಥ ಸಹಿತವಾಗಿ ಅಯೋಧ್ಯೆಯಿಂದ ಹೊರಟ; ತೀವ್ರವೇ ಭರತನೊಡನೆ ರಾಜಧಾನಿಗೆ ಮರಳಿದ. ದಾರಿಯಲ್ಲಿ—

" ಸಾರಥಿ, ಮಾವನ ಮನೆಯಲ್ಲಿದ್ದು ಬಹುಕಾಲವಾಗಿದೆ. ಅಯೋಧ್ಯೆಯ ಸುದ್ದಿಯೇ ತಿಳಿದಿಲ್ಲ. ತಂದೆಯವರು ಅಸ್ವಸ್ಥರಾಗಿರುವರೆಂದು ಕೇಳಿದ್ದೇನೆ. ಅವರಿಗೆ ಯಾವ ರೋಗ ಬಂದಿದೆ " ಭರತ ಖಿನ್ನಮನಸ್ಸಿನಿಂದ ಕೇಳಿದ.

" ಮಾನಸಿಕ ಸಂತಾಪ ಬಹಳವಾಗಿದೆ. " ಸಾರಥಿ.

" ವೈದ್ಯರು ಆ ಬಗೆಗೆ ಏನು ಹೇಳಿದ್ದಾರೆ ? " ಭರತ.

" ಅದನ್ನು ಕಂಡು ಹಿಡಿಯುವ ಕುಶಲವೈದ್ಯರಿಲ್ಲ " ಸಾರಥಿ.

" ಆಹಾರವನ್ನು ತೆಗೆದುಕೊಳ್ಳುತ್ತಾರೆಯೇ ? ನಿದ್ದೆ ಮಾಡುತ್ತಾರೆಯೇ ? " ಭರತ.

" ಊಟ ನಿದ್ದೆಗಳನ್ನು ಬಿಟ್ಟು ಭೂಮಿಗೆ ಒರಗಿದ್ದಾರೆ" ಸಾರಥಿ.

" ಅವರು ಬದುಕುವ ಆಸೆಯಿದೆಯೇ ? " ಭರತ.

" ದೈವವೇ ಉತ್ತರವನ್ನು ಕೊಡಬೇಕು ! " ಸಾರಥಿ.

" ಎದೆಬಡಿದುಕೊಳ್ಳುತ್ತಿದೆ. ಬೇಗ ಬೇಗ ರಥವನ್ನು ಓಡಿಸು" ಭರತ.

ಸಾರಥಿ ಬಾಯಿಬಿಟ್ಟು ಹೇಳಲಿಲ್ಲ ಮಹಾರಾಜರ ಮರಣವಾರ್ತೆಯನ್ನು. ಆದರೂ ಏನೋ ಅನಿಷ್ಟವಾಗಿರಬೇಕು, ಎಂದು ಭರತನಿಗೆ ಎನಿಸುತ್ತಿತ್ತು. ಗಾಳಿಗೂ ಮಿಕ್ಕಿ ರಥದ ಕುದುರೆಗಳು ಓಡುತ್ತಿದ್ದುವು. ರಾಜಕುಮಾರನ ಮನಸ್ಸು ಅದಕ್ಕೂ ಮುಂದೆ ಮುಂದೆ ಹೋಗುತ್ತಿತ್ತು. ತುಸುಹೊತ್ತಿನ ಮೇಲೆ ಅಯೋಧ್ಯೆ ಸಮೀಪಿಸಿದ ಲಕ್ಷಣಗಳು ತೋರಿ

ದುವು. ನಗರದ ಸುತ್ತಲಿನ ಎತ್ತರವಾದ ಮರಗಳು ಈತನನ್ನು ದೂರ ದಿಂದಲೇ ಸ್ವಾಗತಿಸುತ್ತಿದ್ದುವು.

ಭರತ ಈಗ ಅರಮನೆಯಲ್ಲಿಯೇ ಇದ್ದಂತೆ ಕನಸು ಕಾಣತೊಡಗಿದ; ತಾನು ತಂದೆಗೆ ನಮಸ್ಕರಿಸಿದ್ದಾನೆ. ಆತ ಮಗನನ್ನು ಮುಂಡಾಡುತ್ತ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದಾನೆ. ಅಣ್ಣತಮ್ಮಂದಿರು ಬಂದು ಆತನನ್ನು ಆಲಿಂಗಿಸಿಕೊಂಡಿದ್ದಾರೆ. ತಾಯಂದಿರು ಆತನ ಮೇಲೆ ಆನಂದಾಶ್ರುಗಳನ್ನು ಅಭಿಷೇಕ ಮಾಡುತ್ತಿದ್ದಾರೆ. ಆಳು ಮಕ್ಕಳು ಆತನನ್ನು ನೋಡುತ್ತ– ಇದ್ದಂತೆಯೇ ಇದ್ದಾನೆ, ಸೊರಗಿದ್ದಾನೆ, ಪುಷ್ಟವಾಗಿದ್ದಾನೆ— ಹೀಗೆ ಏನೇನೋ ಮಾತನಾಡಿಕೊಳ್ಳುತ್ತಿದ್ದಾರೆ. ಈತನ ವೇಷಭಾಷೆಗಳನ್ನು ನೋಡಿ ಲಕ್ಷ್ಮಣ ನಗೆಯಾಡುತ್ತಿದ್ದಾನೆ.... ! ಹೀಗೆಯೇ ಕಲ್ಪನೆಯಲ್ಲಿ ಮಹದಾನಂದವನ್ನು ಅನುಭವಿಸುತ್ತಿದ್ದ. ವಸ್ತುಸ್ಥಿತಿ ಇದಕ್ಕೆ ತುಂಬಾ ವಿಪರೀತವಾಗಿತ್ತು. ಭವಿಷ್ಯತ್ತಿನ ಅಜ್ಞಾನವೇ ಮಾನವ ಬಾಳಿನ ಜೀವಾಳವೋ ಏನೋ !

ಅದೇ ಸಮಯಕ್ಕೆ ಸಾರಥಿ ಒಳಗೊಳಗೇ ತಳಮಳಿಸುತ್ತಿದ್ದ. ಅರಸರು ಅಳಿದ ಸುದ್ದಿಯನ್ನು ಅವನು ಬೇಕೆಂತಲೇ ಹೇಳಿರಲಿಲ್ಲ. ತಂದೆಯ ಮರಣ, ತಾಯಿಯ ರಾಜ್ಯ ದುರಾಶೆ, ಪ್ರಿಯ ಬಂಧುಗಳ ವನವಾಸ........ ಒಂದಕ್ಕಿಂತ ಒಂದು ಭಯಂಕರವಾದ ವಿಷವಾರ್ತೆಯನ್ನು ಯಾವ ನಾಲಿಗೆಯಿಂದ ಹೇಳಬೇಕು ?

ರಥ ನಗರದ ಗಡಿಯಲ್ಲಿ ಬಂದಿತು. ಜಯಕಾರವನ್ನು ಹೇಳುತ್ತ ಭಟನೊಬ್ಬ ಇದಿರಿಗೆ ಬಂದ. ಅವನನ್ನು ನೋಡುತ್ತಲೇ....

"ಶತ್ರುಘ್ನ ಬಂದಿದ್ದಾನೆಯೇ ?" ಆತುರದಿಂದ ಕೇಳಿದ ಭರತ.

"ಅವರು ಬರುತ್ತಿದ್ದಾರೆ. ಆದರೆ ಪುರೋಹಿತರು ತಮಗೊಂದು ವಿನಂತಿಯನ್ನು ಕಳಿಸಿದ್ದಾರೆ: ಕೃತ್ತಿಕಾ ನಕ್ಷತ್ರ ಕೊನೆಯ ದಂಡ ಉಳಿದಿದೆಯೆಂತೆ. ಅದು ಮುಗಿಯುತ್ತಲೇ ರೋಹಿಣೀ ನಕ್ಷತ್ರ ಬರುತ್ತಿದೆ. ಆ ಮೇಲೆ ಯುವರಾಜರು ಪುರಪ್ರವೇಶವನ್ನು ಮಾಡಬೇಕೆಂತೆ." ಭಟ ತಿರುಗಿಹೋದ.

ಭರತ ಗುರುಹಿರಿಯರ ಮಾತನ್ನು ಮೀರುವವನಲ್ಲ. ಪಟ್ಟಣದ ಹೊರಗೇ ರಥವನ್ನು ಇಳಿದ; ವಿಶ್ರಾಂತಿಗಾಗಿ ಅತ್ತಿತ್ತ ಸ್ಥಳವನ್ನು ಹುಡುಕತೊಡಗಿದ. ಮರಗಳ ಮಧ್ಯದಲ್ಲಿ ದೇವಾಲಯವೊಂದು ಕಾಣಿಸಿತು. ಅಲ್ಲಿ ದೇವದರ್ಶನವನ್ನು ಮಾಡಿಕೊಳ್ಳಬಹುದು; ವಿಶ್ರಾಂತಿಯನ್ನು ಪಡೆಯಬಹುದು. ನಗರ ಪ್ರವೇಶಕ್ಕೆ ಇದೊಂದು ಒಳ್ಳೆಯ ಸಂಪ್ರದಾಯವೇ ಆಗಿತ್ತು.

ಭರತ ದೇವಮಂದಿರದ ಹತ್ತಿರಕ್ಕೆ ಹೋದ. ಅಲ್ಲಿ ಪದ್ಧತಿಯಂತೆ ಹೂ ಅರಳುಗಳನ್ನು ಬಲಿಕೊಡಲಾಗಿತ್ತು. ಗೋಡೆಗಳ ಮೇಲೆ ಅಯ್ದು ಬೆರಳುಗಳನ್ನುಳ್ಳ ಹಸ್ತದ ಅಯ್ದು ಮುದ್ರೆಗಳು ಮೂಡಿದ್ದವು. ಮಹಾದ್ವಾರದ ಮೇಲೆ ತಳಿರು ತೋರಣ ಮಾಲೆಗಳು ಮೂಡಿದ್ದವು. ನೆಲದ ಮೇಲೆ ಸಣ್ಣನೆಯ ಉಸುಕು ಹರಡಿತ್ತು. ಅದನ್ನೆಲ್ಲ ನೋಡಿದಾಗ— ಇಂದೇನಾದರೂ ಹಬ್ಬದ ವಿಶೇಷ ದಿನವಿದೆಯೇ ? ಅಥವಾ ನಿತ್ಯವೂ ಹೀಗೆಯೇ ಪೂಜಾ ಪುರಸ್ಕಾರಗಳು ನಡೆಯುತ್ತಿವೆಯೇ ? ಇದು ಯಾವ ದೇವರ ದೇವಾಲಯವಾಗಿರಬಹುದು ? ಈ ದೇವಾಲಯದ ಹೊರಗೆ ಯಾವ ವಿಶಿಷ್ಟ ಆಯುಧಗಳಿಲ್ಲ, ವಾಹನಗಳಿಲ್ಲ, ಬೇರೆ ಹೆಗ್ಗುರುತುಗಳೂ ಇಲ್ಲ. ಒಳ್ಳೆಯದು ಒಳಗೆ ಹೋಗಿಯೇ ನೋಡೋಣ....'' ಎನ್ನುತ್ತ ಭರತ ಮಂದಿರವನ್ನು ಒಳಹೊಕ್ಕ.

ಕಲ್ಲಿನಲ್ಲಿ ಎಂತಹ ಸುಂದರ ಕಲಾಕೃತಿಗಳು ! ಎಷ್ಟು ಸೊಗಸಾದ ಸುಳಿವು ಹೊಳವುಗಳು ! ಮೂರ್ತಿಗಳ ಮುಖದ ಮೇಲೆ ವ್ಯಕ್ತಿತ್ವದ ಪ್ರಭಾವ ಎಷ್ಟು ಎದ್ದು ಕಾಣುತ್ತಿತ್ತು. ದೇವ ಮೂರ್ತಿಗಳಾಗಿದ್ದರೂ ಮಾನವ ಮಹಾತ್ಮರನ್ನು ಹೋಲುತ್ತಿದ್ದವು. ಇಲ್ಲಿ ಒತ್ತಟ್ಟಿಗೆ ನಾಲ್ಕು ಮೂರ್ತಿಗಳನ್ನು ಏಕೆ ಇರಿಸಿರಬಹುದು ! ಇವುಗಳ ದರ್ಶನದಿಂದ ನನಗೆ ಎಷ್ಟೊಂದು ಆನಂದವಾಗುತ್ತಿದೆಯಲ್ಲ.... ! ಮುಂತಾಗಿ ಭರತ ವಿಚಾರಿಸುತ್ತಿದ್ದ; ಮಂತ್ರಗಳು ಬಾರದಿದ್ದರೂ ತಲೆತಗ್ಗಿಸಿ ನಮಸ್ಕಾರ ಮಾಡಿದ.

ಆ ಹೊತ್ತಿಗೆ ದೇವ ಪೂಜಾರಿ ಅಲ್ಲಿಗೆ ಬಂದ. ಅವನು ನಿತ್ಯದಂತೆ ಪೂಜಾದಿಗಳನ್ನು ಮುಗಿಸಿಕೊಂಡು ಊಟವನ್ನು ತೀರಿಸಿಕೊಂಡು ಬರುವುದಕ್ಕೆ ತುಸು ತಡವಾಗಿತ್ತು. ಆ ಮಧ್ಯದಲ್ಲಿ ಭರತ ದೇವಾಲಯುವನ್ನು ಪ್ರವೇಶಿಸಿದ್ದ.

ಪೂಜಾರಿ ದೂರದಿಂದಲೇ ಆಗಂತುಕನನ್ನು ನೋಡಿದ. ಆ ಮೂರ್ತಿಗಳಿಗೂ ಈತನ ಮುಖಕ್ಕೂ ಅತ್ಯಂತ ಸಾಮ್ಯ ತೋರುತ್ತಿತ್ತು. ಈ ತೇಜಸ್ವಿ ಯಾರಾಗಿರಬಹುದು?.... ಹೀಗೆಯೇ ವಿಚಾರಿಸುತ್ತ ಮಂದಿರವನ್ನು ಸೇರಿದ.

ಭರತ ಪೂಜಾರಿಯಿಂದ ಆ ದೇವ ಮಂದಿರದ ವಿಚಾರವನ್ನು ಕೇಳತೊಡಗಿದ. ಇವು ದೇವ ಮೂರ್ತಿಗಳಲ್ಲ; ಇಕ್ಷ್ವಾಕುವಂಶದ ದೊರೆಗಳ ಪ್ರತಿಮೆಗಳು, ಎಂದು ಹೇಳಿದ ಪೂಜಾರಿ.

ಇವು ತಮ್ಮದೇ ವಂಶದ ಪೂರ್ವಜರ ಪ್ರತಿಮೆಗಳೇ? ಭರತನಿಗೆ ಪರಮಾನಂದವಾಯಿತು. ರಘುವಂಶದ ದೊರೆಗಳ ಸ್ಥೂಲಮಾನ ಚರಿತ್ರವನ್ನು ಭರತ ಅಲ್ಪಸ್ವಲ್ಪ ಕೇಳಿದ್ದ. ಆ ದೊರೆಗಳು ದೇವಾಸುರ ಯುದ್ಧದಲ್ಲಿ ಸುರರಿಗೆ ನೆರವಾಗುತ್ತಿದ್ದರು; ಅಸುರರನ್ನು ಸಂಹರಿಸುತ್ತಿದ್ದರು; ತಮ್ಮ ಪುಣ್ಯ ಪ್ರಭಾವದಿಂದ ಪ್ರಜಾಜನ ಸಹಿತವಾಗಿ ದೇವಲೋಕಕ್ಕೆ ಹೋಗಿ ಬರುತ್ತಿದ್ದರು; ತಮ್ಮ ಭುಜಬಲದಿಂದ ಅಖಂಡ ಭೂಮಂಡಲವನ್ನು ಆಳುತ್ತಿದ್ದರು; ಮತ್ತು ಮೃತ್ಯುದೇವನನ್ನು ಕೂಡ ತಮಗೆ ಬೇಕೆನಿಸಿದಾಗ ಮಾತ್ರ ಹತ್ತಿರ ಬರಗೊಡುತ್ತಿದ್ದರು.... ಈ ಮುಂತಾದ ವಿಷಯಗಳು ಆತನಿಗೆ ತಿಳಿದಿದ್ದವು. ಆದರೆ ಪ್ರತಿಯೊಬ್ಬರ ವಿವರ ತಿಳಿದಿರಲಿಲ್ಲ. ಆದುದರಿಂದಲೇ, ಆ ಪ್ರತಿಮೆಗಳ ಬಗೆಗೆ ವಿಶಿಷ್ಟ ವಿಚಾರಗಳನ್ನು ಹೇಳಲು ಪೂಜಾರಿಯನ್ನು ಕೇಳಿದ.

“ಈತ ಸರ್ವಶ್ರೇಷ್ಠ ವಸ್ತುಗಳನ್ನು ಸಂಗ್ರಹಿಸಿದ ಮತ್ತು ವಿಶ್ವಜಿತ್‌ಯಜ್ಞವನ್ನು ಮಾಡಿದ, ಹೀಗೆಯೇ ಧರ್ಮವನ್ನು ದೀಪ್ತಿಗೊಳಿಸಿದ **ದಿಲೀಪ ಮಹಾರಾಜ.**

ಈತ ಮಲಗುವಾಗಲೂ ಏಳುವಾಗಲೂ ಸಾವಿರಾರು ಬ್ರಾಹ್ಮಣರಿಂದ ಪುಣ್ಯಾಹವಾಚನ ಮಾಡಿಸಿಕೊಳ್ಳುತ್ತಿದ್ದ **ರಘು ಮಹಾರಾಜ.**

ಈತ ಪ್ರಿಯಪತ್ನಿ ವಿಯೋಗದಿಂದ ವಿರಕ್ತನಾಗಿ ದಿನದಿನವೂ ಯಜ್ಞ ಮಾಡುತ್ತಿದ್ದ ಮತ್ತು ಅವಭೃತ ಸ್ನಾನದಿಂದ ಮನಸ್ಸಿನ ರಜಸ್ಸನ್ನು ತೊಳೆಯುತ್ತಿದ್ದ **ಅಜ ಮಹಾರಾಜ.** "

ನಾಲ್ಕನೆಯ ಮೂರ್ತಿಯನ್ನು ಭರತ ನೋಡಿದ. ಅದೇಕೋ ಎದೆ ಧಸ್ ಎಂದಿತು. ಮುಂದೆ ಕೇಳವ ಧೈರ್ಯವಾಗಲಿಲ್ಲ. ಹಿಂದೆ ಹೇಳಿದ ಮಹಾರಾಜರ ಹೆಸರುಗಳನ್ನೇ ಮತ್ತೆ ಮತ್ತೆ ಕೇಳಿದ. ಆದರೂ ಮನಸ್ಸಿಗೆ ಸಮಾಧಾನವಾಗಲಿಲ್ಲ. ಅಂಜುತ್ತ ಅಂಜುತ್ತ ಕೇಳಿದ— ಪೂಜಾರಿಗಳೇ, ಜೀವಂತವಿರುವ ಮಹಾರಾಜರ ಪ್ರತಿಮೆಗಳನ್ನು ಇಲ್ಲಿ ಇಡುತ್ತಾರೆಯೇ ?

" ಇಲ್ಲ ಕುಮಾರಾ, ಸತ್ತವರ ಪ್ರತಿಮೆಗಳನ್ನು ಮಾತ್ರ. " ಪೂಜಾರಿ ಹೇಳಿದ.

ಭರತ ಅಷ್ಟಕ್ಕೆ ಸುಮ್ಮನಾದ, ಹೊರಟು ನಿಂತ. ಆಗ ಪೂಜಾರಿಯೇ ತಡೆದು ನಿಲ್ಲಿಸಿದ— ಯಾರು ಮದುವೆಯ ಕಾಲಕ್ಕೆ ಕೊಟ್ಟ ವಚನದ ಸಲುವಾಗಿ ರಾಜ್ಯವನ್ನೂ ಪ್ರಾಣಗಳನ್ನೂ ಒಂದೇ ಕಾಲಕ್ಕೆ ಕೊಟ್ಟರೋ ಅಂತಹ ದಶರಥ ಮಹಾರಾಜನ ಪ್ರತಿಮೆಯ ಸಲುವಾಗಿ ಏನನ್ನೂ ಕೇಳಲಿಲ್ಲವಲ್ಲ ! ಏಕೆ ಎಂದು ಕೇಳಿದ.

" ಹಾ, ತಾತಾ ! " ಎನ್ನುತ್ತ ಭರತ ಮೈಮರೆತು ಬಿದ್ದುಬಿಟ್ಟ. ಮತ್ತೆ ಸಾವರಿಸಿಕೊಂಡು.... " ಈ ವರೆಗೆ ನನಗಿದ್ದ ಸಂಶಯ ಈಗ ನಿಶ್ಚಯಕ್ಕೆ ತಿರುಗಿತು. ತಂದೆಯ ಮರಣವಾರ್ತೆಯನ್ನು ಕೇಳಿಯೂ ನಾನು ಬದುಕಲೇ ಬೇಕಾಗಿದೆ. ಅವರ ಮರಣಕ್ಕೆ ಕಾರಣವಾದ ಸ್ತ್ರೀ ಶುಲ್ಕದ ಬೇಡಿಕೆಗೆ ನಾನೇ ಕಾರಣನಾಗಿದ್ದರೆ.... ? ಹೌದು; ನಾನು ಬದುಕಲೇಬೇಕು; ನನ್ನ ನಿರ್ದೋಷತನವನ್ನು ಜಗತ್ತಿಗೆ ತೋರಿಸಿಕೊಡಲೇಬೇಕು. ಆರ್ಯನೇ, ಉಳಿದ ಸುದ್ದಿಯನ್ನು ಸ್ವಲ್ಪದರಲ್ಲಿಯೇ ಹೇಳುವೆಯಾ ? " ಎಂದು ಬಿನ್ನವಿಸಿದ.

" ಕೇಳಬೇಕು— ಮಹಾರಾಜರು ಮರಣ ಹೊಂದಿದರು. ಆ ಮೊದಲೇ ರಾಮ ಲಕ್ಷ್ಮಣ ಸೀತಾದೇವಿಯವರು ವನವಾಸಕ್ಕೆ ತೆರಳಿದರು. "

" ಹಾ ! ಅಣ್ಣಾಽಽ ! ಹಾಽಽ ! ಅತ್ತಿಗೇ ! " ಭರತ ಮತ್ತೆ ಮೂರ್ಛೆಹೋದ. ಎಚ್ಚತ್ತ ಮೇಲೆ— ತಂದೆಯೂ ತಂದೆಯ ಸಮಾನನಾದ ಅಣ್ಣನೂ ಇಲ್ಲದೆ ಸುಡುಗಾಡಿನಂತಾದ ಅಯೋಧ್ಯೆಯಲ್ಲಿ ನಾನಿನ್ನು ಪ್ರವೇಶ ಮಾಡಬೇಕೇ? ನೀರಡಿಸಿದವನು ಹರಿಗಡಿದ ನದಿಯ ನೀರನ್ನು ನೆನೆಸಿ ಓಡಿದಂತಾಯಿತೇ ನನ್ನ ಸ್ಥಿತಿ ! ಎಂದು ಹಂಬಲಿಸಿದ. ಈ ದುರಂತಗಳ ಕಾರಣವನ್ನು ತಳದಿಂದ ತುದಿಯವರೆಗೂ ಕೇಳಬೇಕೆನಿಸಿತು ಭರತನಿಗೆ. ಈತ ಕೈಕೇಯಿದೇವಿಯ ಮಗನೆಂದೂ ಪೂಜಾರಿ ತಿಳಿದುಕೊಂಡ.

ಪೂಜಾರಿ ಹೇಳತೊಡಗಿದ; " ಮಹಾರಾಜರು ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಉತ್ಸವವನ್ನು ಆರಂಭಿಸಿದ್ದರು. ಆ ಸಮಯದಲ್ಲಿ ನಿಮ್ಮ ತಾಯಿ ಕೈಕೇಯಿದೇವಿ ದೊರೆಗಳಿಗೆ ಒಂದು ಹೇಳಿಕೆಯನ್ನು ಕಳಿಸಿದಳು.... "

" ತಿಳಿಯಿತು. ಕೈಕೇಯಿಗೆ ಆಗ ತಾನೆ ವಿವಾಹಶುಲ್ಕ (ತೆರವು)ದ ನೆನಪು ಬಂದಿತು. ಕೂಡಲೆ, ನನ್ನ ಮಗನಾದ ಭರತನಿಗೆ ರಾಜ್ಯ ದೊರೆಯಬೇಕು. ಎಂದು ಕೇಳಿದಳು. ವಚನ ಕೊಟ್ಟ ಮಹಾರಾಜರು ಅದನ್ನು ಒಪ್ಪಲೇಬೇಕಾಯಿತು. ಆಗ ಕೈಕೇಯಿಗೆ ಮತ್ತಿಷ್ಟು ಧೈರ್ಯ ಬಂದಿತೇನೋ ! ರಾಮನನ್ನು ಕಾಡಿಗೆ ಕಳಿಸಬೇಕು, ಎಂದು ಮತ್ತೊಂದು ಬೇಡಿಕೆಯನ್ನು ಇಟ್ಟಿರಬೇಕು. ಪಿತೃಭಕ್ತನಾದ ರಾಮಚಂದ್ರ ನಾರುಮಡಿಗಳನ್ನು ಉಟ್ಟು ವನಕ್ಕೆ ಹೊರಟುಬಿಟ್ಟ. ಪುತ್ರನ ಅಗಲಿಕೆ ತಡೆಯಲಾರದೆ ಮಹಾರಾಜರು ಪ್ರಾಣ ಬಿಟ್ಟರು. ಇದರಿಂದ ದುಃಖಿತರಾದ ಪ್ರಜೆಗಳು ಈ ಅನರ್ಥಗಳಿಗೆ ಮೂಲವಾದ ಭರತನನ್ನು ಬಾಯಿಗೆ ಬಲ್ಲಂತೆ ಬಯ್ಯುತ್ತಿರಬಹುದು. ಬಯ್ಯಲಿ ! ಇದರಲ್ಲಿ ಅವರ ತಪ್ಪೇನೂ ಇಲ್ಲ. "

ಮಾತನಾಡುತ್ತಿದ್ದಂತೆಯೇ ಭರತ ಮೂರ್ಛೆಯಿಂದ ನೆಲಕ್ಕೆ ಒರಗಿದ.

ಅದೇ ಹೊತ್ತಿಗೆ ಸುಮಂತ ಮಂತ್ರಿ ಮತ್ತು ಮೂವರೂ ರಾಣಿಯರು ಅಲ್ಲಿಗೆ ಆಗಮಿಸಿದರು.

" ಮಹಾರಾಣಿಯರೇ, ಇತ್ತ ಬರಬೇಕು. ಈ ಅರಮನೆಗಿಂತಲೂ ಮಹೋನ್ನತವಾದ ಈ ಮಂದಿರದಲ್ಲಿ ಮಹಾರಾಜನ ಪ್ರತಿಮೆ ಇಟ್ಟಿದೆ. ಯಾತ್ರಿಕರು ಇಲ್ಲಿ ಬೇಕಾದಂತೆ ಬರುತ್ತಾರೆ, ಹೋಗುತ್ತಾರೆ; ಮೂರ್ತಿಗಳಿಗೆ ಗೌರವವನ್ನು ಸಲ್ಲಿಸುತ್ತಾರೆ....ಆದರೆ ಸ್ವಲ್ಪ ತಡೆಯಿರಿ. ದಶರಥ ಮಹಾರಾಜರ ತಾರುಣ್ಯದ ರೂಪವನ್ನೇ ಹೋಲುವ ಯಾವನೋ ಯುವಕ ಇಲ್ಲಿ ಮೈಮರೆತು ಮಲಗಿದ್ದಾನೆ. " ಸುಮಂತ ಹೇಳಿದ.

" ತಾವೇನೂ ಪರಕೀಯನೆಂದು ಭಾವಿಸಬೇಕಾಗಿಲ್ಲ. ಈತನೇ ಭರತ ರಾಜಕುಮಾರ. ಈತನನ್ನು ಉಪಚರಿಸಿ ಎಚ್ಚರಿಸಿರಿ. " ಹೇಳುತ್ತ ಪೂಜಾರಿ ಹೊರಟುಹೋದ.

ರಾಣಿಯರು ' ಅಯ್ಯೋ ಮಗೂ ಭರತಾಽಽ ' ಎಂದು ಗೋಳಿಟ್ಟರು. ಭರತ ಮೆಲ್ಲನೆ ಕಂದೆರೆದು ನೋಡಿದ; ಸುಮಂತಾ, ನಮ್ಮ ತಾತನೆಲ್ಲಿ ? ಎಂದು ದುಃಖಿಸಿದ. ಬಳಿಕ ಕೌಸಲ್ಯಾದೇವಿಗೂ ಸುಮಿತ್ರಾದೇವಿಗೂ ನಮಸ್ಕಾರಮಾಡಿದ; ನಿರಪರಾಧಿಯಾದ ತನ್ನ ಮೇಲಿನ ಆರೋಪಗಳನ್ನು ಕ್ಷಮಿಸಬೇಕು, ಎಂದು ಕೇಳಿಕೊಂಡ; ಆ ತಾಯಿಯರೂ ನಿರ್ಮಲಹೃದಯದಿಂದ ಆತನನ್ನು ಹರಸಿದರು. ದುಃಖಮಾಡಬೇಡ, ಎಂದು ಸಂತಯಿಸಿದರು.

ಆ ಮೇಲೆ ಕೈಕೇಯಿಯನ್ನು ಕಾಣುತ್ತಲೇ ಅವನ ಕಣ್ಣು ಕೆಂಪಗಾದುವು. " ಛೀ ಪಾಪಿಷ್ಠೇ ! ಗಂಗಾಯಮುನಾ ನದಿಗಳ ನಡುವೆ ಸೇರಿದ ಕ್ಷುದ್ರ ನದಿಯಂತೆ, ಈ ಪವಿತ್ರ ಕೌಸಲ್ಯಾ ಸುಮಿತ್ರಾ ಮಾತೆಯರ ನಡುವೆ ನೀನೇಕೆ ಸೇರಿದೆ ? " ಎಂದು ಧಿಕ್ಕರಿಸಿದ.

" ಮಗು, ನಾನಾವ ತಪ್ಪು ಮಾಡಿರುವೆ ? " ಕೈಕೇಯಿ ಮುಖಭಂಗಿತಳಾಗಿ ಕೇಳಿದಳು.

" ಒಂದಲ್ಲ, ಎರಡಲ್ಲ; ಕೇಳು: ನನ್ನ ತಲೆಯ ಮೇಲೆ ಅಪಕೀರ್ತಿಯ ಗಂಟನ್ನು ಹೊರಿಸಿದಿ. ಪೂಜ್ಯ ರಾಮನಿಗೆ ನಾರುಮಡಿಗಳನ್ನು ಉಡಿಸಿದಿ. ಮಹಾರಾಜನಿಗೆ ಮರಣದ ದಾರಿಯನ್ನು ತೋರಿಸಿದಿ. ಅಯೋಧ್ಯೆಯೆಲ್ಲವನ್ನು ಅಳಹಚ್ಚಿದಿ. ಲಕ್ಷ್ಮಣನಿಗೆ ಪಶುಗಳ ಸಹವಾಸವನ್ನು ಕೊಟ್ಟೆ. ಪುತ್ರಪ್ರೇಮಿಗಳಾದ ಮಹಾರಾಣಿಯರನ್ನು ಕಣ್ಣೀರಿನ ಕಡಲಲ್ಲಿ ಮುಳುಗಿಸಿದಿ. ಕುಲವಧು ಸೀತಾದೇವಿಗೆ ಕಾಡಿನ ಕಷ್ಟಗಳನ್ನು ಸೋಸಹಚ್ಚಿದಿ. ಕೊನೆಯದಾಗಿ, ನಿನ್ನನ್ನು ಸರ್ವರ ತಿರಸ್ಕಾರಕ್ಕೆ ಪಾತ್ರಳನ್ನಾಗಿ ಮಾಡಿಕೊಂಡಿ. ಸಾಕಲ್ಲವೇ ? " ತಿರಸ್ಕಾರದಿಂದ ಚುಚ್ಚು ನುಡಿದ ಭರತ.

" ಮಗು ಭರತಾ, ವಿನಯ ಶೀಲನಾದ ನೀನು ಹಾಗೆಲ್ಲ ಆಡಬಾರದು. ನಿನ್ನ ತಾಯಿಯನ್ನು ನಮಸ್ಕರಿಸಪ್ಪಾ ! " ಕೌಸಲ್ಯಾದೇವಿ ಮಮತೆಯಿಂದ ನುಡಿದಳು.

" ಅವಳು ಒಂದು ಕಾಲದಲ್ಲಿ ನನ್ನ ತಾಯಿಯಾಗಿದ್ದಳು, ಆದರೆ ಈಗ ಇಲ್ಲ. ದುಷ್ಟ ಸೇವಕರ ಸಹವಾಸದಿಂದ ಸ್ನೇಹ ಶಕ್ತಿಯನ್ನು ಕಳೆದುಕೊಂಡಿದ್ದಾಳೆ; ಪುತ್ರ ಪ್ರೇಮ ಸಂಬಂಧವನ್ನು ಕಡಿದುಕೊಂಡಿದ್ದಾಳೆ. ಪತಿದ್ರೋಹವನ್ನು ಮಾಡುವ ಸ್ತ್ರೀ ಪುತ್ರವತಿಯಾಗಿದ್ದರೂ, ಮಕ್ಕಳು ಆಕೆಯನ್ನು ತಾಯಿ ಎಂದು ಕರೆಯತಕ್ಕದ್ದಲ್ಲ, ಎಂಬ ರೂಢಿಯನ್ನು ಮೊತ್ತಮೊದಲಿಗೆ ನಾನೇ ಬಳಕೆಯಲ್ಲಿ ತರಬೇಕೆಂದಿದ್ದೇನೆ. " ಭರತ ಮತ್ತಿಷ್ಟು ಬಿರುಸಾಗಿ ಬಾಣಬಿಟ್ಟ.

" ಮಗನೇ, ಮಹಾರಾಜರ ಪ್ರತಿಜ್ಞೆಯನ್ನು ರಕ್ಷಿಸುವದಕ್ಕಾಗಿ ನಾನು ಹಾಗೆ ಹೇಳಬೇಕಾಯಿತು. " ಕೈಕೇಯಿ ತಿಳಿಹೇಳಲು ಯತ್ನಿಸಿದಳು.

" ಏನೆಂದು ಹೇಳಿದೆ ? " ಭರತ ಕೋಪದಿಂದಲೇ ಕೇಳಿದ.

" ನನ್ನ ಮಗ ರಾಜ್ಯಾಧಿಕಾರಿಯಾಗಬೇಕು " ಕೈಕೇಯಿ.

" ರಾಮಚಂದ್ರ ನಿನಗೆ ಏನಾಗಬೇಕು ? ಮಗನೇ ಅಲ್ಲವೇ ? ಆತನು ಮಹಾರಾಜರಿಗೆ ಔರಸ ಪುತ್ರನಲ್ಲವೇ ? ಆತನೇ ಪಟ್ಟಕ್ಕೆ

ಬಾಧ್ಯನಲ್ಲವೇ ? ನಾನೆಂದಾದರೂ ಆತನಿಗೆ ಹಗೆ ತೋರುತ್ತಿದ್ದೆನೇ ? ರಾಮಚಂದ್ರನ ಪಟ್ಟಾಭಿಷೇಕವನ್ನು ಪ್ರಜೆಗಳು ಒಪ್ಪುತ್ತಿರಲಿಲ್ಲವೇ ? ಯಾವ ಕಾರಣದಿಂದ ನೀನು ಹಾಗೆ ಕೇಳಿದೆ ? " ಭರತನ ಅಭಿಪ್ರಾಯದಲ್ಲಿ ಕೈಕೇಯಿ ತಪ್ಪಿತಸ್ಥಳೆಂದೇ ತೋರುವಂತಿತ್ತು.

" ಮಗು, ವಿವಾಹಶುಲ್ಕವನ್ನು ಬೇಡಲೇಬೇಕೆನುವವಳಿಗೆ ಈ ಪ್ರಶ್ನೆಗಳನ್ನು ಕೇಳಬಾರದು. " ಕೈಕೇಯಿ.

"ಒಳ್ಳೆಯದು, ಮಗನಿಗೆ ರಾಜ್ಯವನ್ನು ಕೇಳಿದುದನ್ನು ಬಿಡೋಣ. ಆದರೆ, ರಾಮಚಂದ್ರ ನಾರುಮುಡಿಯನ್ನು ಉಡಬೇಕು, ಪತ್ನೀಸಮೇತನಾಗಿ ಕಲ್ಲು, ಮುಳ್ಳುಗಳನ್ನು ತುಳಿಯಬೇಕು; ಕಾಡಿನಲ್ಲಿ ಕಾಲಕಳೆಯಬೇಕು— ಇದೂ ನಿನ್ನ ವಿವಾಹಶುಲ್ಕದ ಬೇಡಿಕೆಯೇ ಏನು ? " ಭರತ ಮತ್ತೆ ಬಿರುಸು ಬಾಣ ಬಿಟ್ಟ.

" ಮಗು, ಈಗ ನೀನು ಕುಪಿತನಾಗಿರುವಿ. ಸಮಯಾನುಸಾರವಾಗಿ ನಿನಗೆಲ್ಲ ತಿಳಿಸಿ ಹೇಳುವೆ. " ಕೈಕೇಯಿ ಶಾಂತಳಾಗಿಯೇ ಹೇಳಿದಳು.

" ಕೈಕೇಯಿ, ನಿನಗೆ ಅಪಕೀರ್ತಿಯೇ ಬೇಕಾಗಿದ್ದರೆ ನಡುವೆ ನನ್ನ ಹೆಸರನ್ನೇಕೆ ತೆಗೆದುಕೊಂಡಿ ? ನಿನಗೆ ರಾಜೈಶ್ವರ್ಯದ ಆಶೆ ಇದ್ದರೆ, ಮಹಾರಾಜರು ಯಾವ ಕೊರತೆ ಮಾಡಿದ್ದರು ? ರಾಜಮಾತೆ ಎನಿಸಿಕೊಳ್ಳಬೇಕು ಎನುವ ಹಂಬಲ ನಿನಗಿದ್ದರೆ, ರಾಮಚಂದ್ರ ನಿನ್ನನ್ನು ತಾಯಿಯೆಂದು ತಿಳಿದಿದ್ದಿಲ್ಲವೇ ? ಆತ ರಾಜನಾದರೂ ನೀನು ರಾಜಮಾತೆಯೇ ಆಗುತ್ತಿರಲಿಲ್ಲವೇ ? ದುಷ್ಟ ಸೇವಕಿಯರ ಮಾತು ಕೇಳಿ ಎಂತಹ ಅನ್ಯಾಯವನ್ನು ಮಾಡಿದೆಯಲ್ಲ ! ಮಹಾರಾಜರ ಪ್ರಾಣಗಳ ಪರವೆಯನ್ನು ಮಾಡಲಿಲ್ಲ ! ಮಗನ ಮಮತೆಯನ್ನು ಮರೆತು ಆತನನ್ನು ಕಾಡಿಗಟ್ಟಿದಿ ! ಕೋಮಲಾಂಗಿಯಾದ ಕುಲವಧು ಸೀತಾದೇವಿ ನಾರುಬಟ್ಟೆ ಉಟ್ಟುದನ್ನು ನೋಡಿದರೂ ನಿನ್ನ ಎದೆ ಸೀಳಿಹೋಗಲಿಲ್ಲವೇ ? ಆ ವಿಧಾತ ನಿನ್ನ ಎದೆಯನ್ನು ವಜ್ರದಿಂದಲೇ ಮಾಡಿರಬಹುದೇ ? "

ಬಾಯಿಗೆ ಬಂದುದೊಂದನ್ನೂ ಉಳಿಸಲಿಲ್ಲ ಭರತ.

ತಾಯಿ ಮಗನ ವಾಗ್ವಾದ ಇನ್ನು ಎಷ್ಟು ಹೊತ್ತು ನಡೆಯುತ್ತಿತ್ತೋ, ಅಷ್ಟರಲ್ಲಿ ವಸಿಷ್ಠ ವಾಮದೇವ ಗುರುಗಳೂ ಪುರಪ್ರಮುಖರೂ ಗಣ್ಯನಾಗರಿಕರೂ ಅಲ್ಲಿಗೆ ಬಂದರು. ಪಟ್ಟಾಭಿಷೇಕವನ್ನು ಮಾಡಿಕೊಳ್ಳಲು ಭರತನನ್ನು ಕೇಳುವದು— ಅವರ ಉದ್ದೇಶವಾಗಿತ್ತು. ಸುಮಂತ ಈ ಮಾತನ್ನು ಮುಂಗಡವಾಗಿಯೇ ಭರತನಿಗೆ ತಿಳಿಸಿದ; ಮತ್ತು "ಕುಮಾರಾ, ಗೋಪಾಲಕನಿಲ್ಲದೆ ಗೋವುಗಳು ನಾಶವಾಗುವಂತೆ, ರಾಜನಿಲ್ಲದೆ ಪ್ರಜೆಗಳೂ ನಾಶವಾಗುತ್ತಾರೆ" ಎಂದು ಮುಂದಿನ ಮಾತುಗಳಿಗೆ ನಾಂದಿಯನ್ನು ಹೇಳಿದ.

"ಹಾಗಿದ್ದರೆ ಪ್ರಜೆಗಳೂ ನನ್ನ ಕೂಡ ಬರಲಿ." ಭರತ ಅನ್ಯಮನಸ್ಕನಾಗಿ ಹೇಳಿದ.

"ರಾಜ್ಯಾಭಿಷೇಕವನ್ನು ಬಿಟ್ಟು ನೀನೆಲ್ಲಿಗೆ ಹೋಗುವೆ?" ಕುತೂಹಲಿಯಾಗಿ ಕೇಳಿದ ಸುಮಂತ.

"ಕೈಕೇಯಿಗೆ ರಾಜ್ಯಾಭಿಷೇಕ ಮಾಡಬಹುದಲ್ಲ!" ಭರತ ಮಾತಿನ ಪೆಟ್ಟು ಕೊಟ್ಟ.

"ಆ ಮೇಲೆ ನೀನೆಲ್ಲಿಗೆ ಹೋಗುತ್ತೀ?" ಸುಮಂತ.

"ರಾಮನಿಲ್ಲದ ಅಯೋಧ್ಯೆ ಅಯೋಧ್ಯೆಯೇ ಅಲ್ಲ. ಎಲ್ಲಿ ಲಕ್ಷ್ಮಣಪ್ರಿಯನಾದ ರಾಮನಿರುವನೋ ಅದೇ ಅಯೋಧ್ಯೆ. ಅಲ್ಲಿಗೇ ಹೋಗುವೆ." ಭರತ ಬಂಧುಪ್ರೇಮದ ಪರಮಾವಧಿಯನ್ನು ಪ್ರಕಟಿಸಿದ.

ಸುಮಂತನಿಗೆ ಮುಂದೆ ಮಾತೆತ್ತಲಾಗಲಿಲ್ಲ. ವಸಿಷ್ಠ ಗುರುಗಳೂ ಪುರಪ್ರಮುಖರೂ ಮುಂಗಾಣದೆ ನಿಂತರು. ಆ ಪ್ರಸಂಗದಲ್ಲಿ ಮಾತನ್ನು ಬೆಳೆಸುವುದು ಹಿತಕರವಾಗಿ ತೋರಲಿಲ್ಲ. ಭರತ ತೀರಾ ಹಟಕ್ಕೆ ಬಿದ್ದಿದ್ದ. ಎಲ್ಲರೂ ಸುಮ್ಮನೆ ಹೊರಟು ಹೋದರು.

ಸಮಯಾನುಸಾರವಾಗಿ ಭರತನಿಗೆ ಪಟ್ಟಾಭಿಷೇಕದ ಅವಶ್ಯಕತೆಯನ್ನು ತಾಯಂದಿರು, ಗುರುಗಳು, ಪ್ರಜೆಗಳು, ಮಂತ್ರಿಗಳು

ಮುಂತಾಗಿ ಎಲ್ಲರೂ ಹೇಳಿ ನೋಡಿದರು. ಏನೂ ಉಪಯೋಗವಾಗಲಿಲ್ಲ. ಅಣ್ಣ, ರಾಮಭದ್ರ ಎಂದು ಅದೇ ಜಪವನ್ನೇ ಮಾಡುತ್ತಿದ್ದ ಭರತ. ತಾನು ರಾಮಚಂದ್ರನನ್ನು ಕಾಣಬೇಕು; ಆತನ ಮನವೊಲಿಸಿ ಅಯೋಧ್ಯೆಗೆ ಕರೆತರಬೇಕು— ಇದು ಅವನ ಹಿರಿಯ ಹಂಬಲವಾಗಿತ್ತು. ಅದರಿಂದ, ಮಂತ್ರಿ ಸಹಿತನಾಗಿ ರಥದಲ್ಲಿ ಕುಳಿತು ರಾಮಚಂದ್ರನನ್ನು ಹುಡುಕುತ್ತ ಹೊರಟ.

"ಪೂಜ್ಯರೇ, ಎಲ್ಲಿದ್ದಾನೆ ರಾಮಚಂದ್ರ? ಮಹಾರಾಜರ ಪ್ರಿಯಪುತ್ರ ಎಲ್ಲಿದ್ದಾನೆ? ವೀರರಸದ ಮೂರ್ತಿ ಎಲ್ಲಿದ್ದಾನೆ? ರಾಜ್ಯಲೋಭದ ಕೈಕೇಯಿಯನ್ನು ತಿರಸ್ಕರಿಸಿದ ರಾಮಚಂದ್ರ ಎಲ್ಲಿದ್ದಾನೆ? ಆ ಯಶೋನಿಧಿ ಎಲ್ಲಿದ್ದಾನೆ? ಆ ಸತ್ಯಸಂಕಲ್ಪ ಎಲ್ಲಿದ್ದಾನೆ" ಹೀಗೆ ದಾರಿಯುದ್ದಕ್ಕೂ ಭರತ ರಾಮ ನಾಮದ ಜಪವನ್ನೇ ಮಾಡುತ್ತಿದ್ದ.

ಸುಮಂತ ಮಂತ್ರಿಗಳು ಹೇಗೊ ಹೇಗೋ ಆತನನ್ನು ಸಮಾಧಾನ ಮಾಡುತ್ತಿದ್ದರು. ರಥ ತಗ್ಗು ದಿಬ್ಬಗಳೆನ್ನದೆ ಸಾಗಿತು; ಕೊನೆಗೊಮ್ಮೆ ಆಶ್ರಮದ ಮುಂದೆ ನಿಂತಿತು.

"ಕುಮಾರಾ, ಇದೇ ಆಶ್ರಮದಲ್ಲಿ ಸತ್ಯವಂತನಾದ ರಾಮಚಂದ್ರ, ಶೀಲವಂತನಾದ ಲಕ್ಷ್ಮಣ, ಭಕ್ತಿಯೇ ಮೂರ್ತಿವೆತ್ತ ಸೀತಾದೇವಿ ವಾಸವಾಗಿದ್ದಾರೆ." ಸುಮಂತ ಹೇಳಿದರು.

ನಡೆದು ಬಂದ ರಾಜ್ಯಲಕ್ಷ್ಮಿಯನ್ನು, ತಂದೆಯ ಮಾತನ್ನು ನಡೆಸುವುದಕ್ಕಾಗಿ ರಾಮಚಂದ್ರ ತ್ಯಾಗಮಾಡಿದ್ದ. ಆ ತ್ಯಾಗಮೂರ್ತಿಯನ್ನು, ಆ ಪಿತೃಭಕ್ತನನ್ನು, ಆ ಮಹಾತ್ಮನನ್ನು ಕಾಣಬೇಕೆಂದು ಭರತ ತವಕಿಸುತ್ತಿದ್ದ. ಆಶ್ರಮದ್ವಾರದಲ್ಲಿ ರಥವನ್ನು ಇಳಿದ. ಸುಮಂತರೂ ಅವನ ಜೊತೆಗೇ ನಿಂತರು.

"ಪೂಜ್ಯರೇ, ಒಳಗೆ ಹೋಗಿ ಹೇಳಿರಿ" ಭರತ ಸುಮಂತನನ್ನು ಕೇಳಿಕೊಂಡ.

"ರಾಜ್ಯಲೋಭಿಯಾದ ಕೈಕೇಯಿಯ ಮಗ ಬಂದಿದ್ದಾನೆ, ಎಂದು ಹೇಳಿರಿ" ಆತ್ಮ ತಿರಸ್ಕಾರದಿಂದ ಹೇಳಿದ ಭರತ.

“ ಹಿರಿಯರಿಗೆ ದೋಷವನ್ನು ಕೊಟ್ಟು ಮಾತನಾಡಬಾರದು, ಯುವರಾಜಾ, ಈ ರೀತಿಯಾಗಿ ನಾನು ಹೇಳಲಾರೆ ” ಸುಮಂತ.

“ ಒಳ್ಳೆಯದು; ಹೆರವರ ದೋಷವನ್ನು ಎತ್ತಿ ಆಡುವುದು ಬೇಡ. ಇಕ್ಷ್ವಾಕುಕುಲಕಲಂಕ ಭರತ ಬಂದಿದ್ದಾನೆ, ಎಂದಾದರೂ ಹೇಳುತ್ತೀರಾ ? ” ಭರತ ಮತ್ತೆಯೂ ಆತ್ಮತಿರಸ್ಕಾರದ ಮಾತುಗಳನ್ನೇ ಆಡಿದ.

“ ಕುಮಾರಾ, ನಿರಪರಾಧಿಯಾದ ನಿನ್ನನ್ನು ಕುಲಕಂಟಕ ಎಂದು ಹೇಳುವುದಕ್ಕೆ ನನ್ನ ನಾಲಿಗೆಯಲ್ಲಿ ಶಕ್ತಿಯಿಲ್ಲ. ಭರತ ಕುಮಾರ ಬಂದಿದ್ದಾರೆ, ಎಂದಿಷ್ಟೇ ಹೇಳಬಲ್ಲೆ ” ಎಂದ ಸುಮಂತ.

“ ನನ್ನಂತಹ ಪಾಪಿಯ ಹೆಸರನ್ನು ಯಾರು ಹೇಳುವುದೂ ಬೇಡ. ನಾನೇ ನನ್ನ ಪರಿಚಯ ಮಾಡಿಕೊಡುತ್ತೇನೆ: ನಿರ್ದಯ, ಉಪಕಾರಗೇಡಿ, ಅನಾಗರಿಕ, ಕಾರ್ಯಸಾಧಕ— ಆದರೆ ರಾಮಚಂದ್ರನಲ್ಲಿ ಭಕ್ತಿಯುಳ್ಳ ಒಬ್ಬನು ದರ್ಶನಕ್ಕಾಗಿ ದ್ವಾರದಲ್ಲಿ ಕಾಯ್ದಿದ್ದಾನೆ. ಒಳಗೆ ಬರಬಹುದೇ, ಇಲ್ಲವೆ ಹಾಗೆಯೇ ತಿರುಗಿ ಹೋಗಬೇಕೇ ? ದಯವಿಟ್ಟು ಉತ್ತರ ಕೊಡಿರಿ. ” ಎಂದು ಗಟ್ಟಿಯಾಗಿ ಕೂಗು ಹಾಕಿದ ಭರತ.

ರಾಮ ಮೊದಲು ಆ ದನಿಯನ್ನು ಕೇಳಿದ. ಸೀತಾ ಲಕ್ಷ್ಮಣರಿಗೂ ಆ ದನಿ ಮುಟ್ಟಿತು. ಇಕ್ಷ್ವಾಕುವಂಶದ ಯಾರದೋ ದನಿ ಇರಬೇಕು— ಎಂದು ಅವರೆಲ್ಲರಿಗೂ ಎನಿಸಿತು. ಇಷ್ಟೇ ಅಲ್ಲ, ದಶರಥ ಮಹಾರಾಜನ ದನಿಯನ್ನೇ ಕೇಳಿದಂತೆ ಎನಿಸಿತು ಅವರಿಗೆ. ಹೊರಗೆ ಬಂದ ವ್ಯಕ್ತಿಯನ್ನು ಗುರುತು ಹಚ್ಚುವದಕ್ಕಾಗಿ ಲಕ್ಷ್ಮಣ ಆಶ್ರಮದ ಹೊರಗೆ ಬಂದ. ಭರತ ಇದಿರಿಗೆ ನಿಂತಿದ್ದ ಲಕ್ಷ್ಮಣ ಕೆಲಹೊತ್ತು ತನ್ನ ಕಣ್ಣುಗಳನ್ನು ತಾನೇ ನಂಬಲಿಲ್ಲ. ಪ್ರತ್ಯಕ್ಷ ರಾಮಚಂದ್ರನನ್ನೇ ನೋಡಿದಂತಾಯಿತು ಅವನಿಗೆ. ಅಷ್ಟೊಂದು ರೂಪ ಸಾದೃಶ್ಯವಿತ್ತು ಅವರಿಬ್ಬರಲ್ಲಿ. ಆತನ ತೇಜಸ್ಸನ್ನು ಕಂಡು, ಈತನೇನು

ದೇವೇಂದ್ರನೋ ಶ್ರೀವಿಷ್ಣುವೋ— ಎಂಬ ಶಂಕೆಯೂ ಬಾರದಿರಲಿಲ್ಲ.

ಅಷ್ಟರಲ್ಲಿ ಸುಮಂತನ ಕಡೆಗೆ ಲಕ್ಷ್ಮಣನ ದೃಷ್ಟಿ ಹೊರಳಿತು. ಮಂತ್ರಿಗಳೇ ಈತ ಯಾರು ? ಎಂದು ಕೇಳಿದ.

" ಕುಲಶ್ರೇಷ್ಠ ಶ್ರೀರಾಮಚಂದ್ರನ ತಮ್ಮ ಭರತ ಕುಮಾರ " ಸುಮಂತ ಪರಿಚಯ ಮಾಡಿಕೊಟ್ಟ.

ಅಂತಹ ತೇಜಸ್ವಿ ತನ್ನ ಕುಲದವನೇ. ಇಷ್ಟೇ ಅಲ್ಲ, ತನಗೆ ಸೋದರನಾಗಬೇಕು— ಈ ವಿಚಾರದಿಂದ ಲಕ್ಷ್ಮಣನಿಗೆ ಹಿಡಿಸಲಾರದಷ್ಟು ಹಿಗ್ಗಾಯಿತು. ಎದೆದುಂಬಿ ಭರತನಿಗೆ ಸ್ವಾಗತವನ್ನು ಬಯಸಿದ; ಶುಭಾಶೀರ್ವಾದ ಮಾಡಿದ. ಅಣ್ಣನಿಗೆ ಈ ಸಂತಸದ ಸುದ್ದಿಯನ್ನು ತಿಳಿಸುವುದಕ್ಕಾಗಿ ಬೇಗ ಬೇಗನೆ ಆಶ್ರಮದೊಳಗೆ ಹೋದ.

ಭರತ ಬಂದ ಸುದ್ದಿ ರಾಮನಿಗೆ ತಿಳಿಯಿತು; ಸೀತಾದೇವಿಗೂ ಗೊತ್ತಾಯಿತು. ಇಬ್ಬರೂ ಪರಮಾನಂದ ಪಟ್ಟರು. ಈ ಆನಂದದಲ್ಲಿಯೇ ರಾಮಚಂದ್ರನಿಗೆ ತಂದೆಯ ನೆನಪಾಯಿತು:

" ನೋಡಿದೆಯಾ ಮೈಥಿಲೀ; ಬಂಧು ಪ್ರೇಮವೇ ಎಷ್ಟೊಂದು ಆನಂದವನ್ನು ಕೊಡುತ್ತಿದೆ ನಮಗೆ. ಎಂದಮೇಲೆ, ನಮ್ಮ ತಂದೆ ಮಕ್ಕಳನ್ನು ಅಗಲಿದಾಗ ಅದೆಷ್ಟು ವ್ಯಸನಪಟ್ಟರೋ ! ಪುತ್ರಪ್ರೇಮದ ಆಳ ಅಳವುಗಳು ಎಷ್ಟು ಎಂದು ಈಗಲೀಗ ತಿಳಿಯುತ್ತಿದೆ. ಇರಲಿ, ಲಕ್ಷ್ಮಣಾ, ಹೋಗು; ಕುಮಾರನನ್ನು ಕರೆದು ತಾ. ಅಥವಾ ನಿಲ್ಲು ಆತನ ಸ್ವಾಗತಕ್ಕಾಗಿ ಸೀತೆಯನ್ನೇ ಕಳಿಸುತ್ತೇನೆ. " ರಾಮಚಂದ್ರ ಹೇಳಿದ.

ಸೀತಾದೇವಿ ಆಶ್ರಮದ ಹೊರಗೆ ಬಂದಳು. ಆಕೆಗೆ ಕೂಡ, ಶ್ರೀರಾಮನ ಪ್ರತಿರೂಪದಂತೆಯೇ ತೋರಿದ ಭರತ. · ಸುಮಂತ ಜಾನಕೀದೇವಿಯ ಕುಶಲವನ್ನು ಕೇಳಿದ; ಈಕೆಯೇ ಸೀತಾದೇವಿ ಎಂದು ಪರಿಚಯ ಮಾಡಿಕೊಟ್ಟ ಭರತನಿಗೆ. ಭರತ ಅತ್ತಿಗೆಗೆ ನಮಸ್ಕಾರಮಾಡಿದ: ಮಂಗಲ ಆಶೀರ್ವಾದಗಳನ್ನು ಪಡೆದ. ಸೀತಾದೇವಿ ಮೈದುನನನ್ನು ಒಳಕ್ಕೆ ಕರೆದುಕೊಂಡು ಹೋದಳು. ಸುಮಂತ, ಆಮೇಲೆ ತಾನು ಬರುವುದಾಗಿ ಹೇಳಿದ.

ಭರತ ಭರದಿಂದಲೇ ಹೋಗಿ ಶ್ರೀರಾಮನ ಪಾದಗಳ ಮೇಲೆ ಮಸ್ತಕವನ್ನು ಇಟ್ಟ; ಕಣ್ಣೀರುಗಳಿಂದ ಕಾಲುಗಳನ್ನು ತೊಳೆಯು ಹತ್ತಿದ. ಆನಂದವೋ ಉದ್ವೇಗವೋ! ಕೆಲ ಹೊತ್ತು ಅವರ ಬಾಯಿಂದ ಮಾತುಗಳೇ ಹೊರಡಲಿಲ್ಲ.

ರಾಮಚಂದ್ರ ಆತನನ್ನು ಎತ್ತಿಕೊಂಡ. ಚಿರಂಜೀವಿಯಾಗು, ಎಂದು ಬಾಯಿತುಂಬಿ ಹರಸಿದ. ಬಹುಕಾಲ ಅಗಲಿದ ಬಂಧುಗಳು ಇಂತಹ ಸಂಕಟ ಸಮಯದಲ್ಲಿ ಕೂಡಿದ್ದರು. ಈ ಸಂಯೋಗ ಸುಖ ಸಮಯಕ್ಕಿಂತಲೂ ಸುಖತರವಾಗಿತ್ತು.

ಆಗ ಸುಮಂತ ಒಳಗೆ ಬಂದ; ಶ್ರೀರಾಮನಿಗೆ ಜಯಕಾರವನ್ನು ಹೇಳಿದ. ಸುಮಂತ ದಶರಥರು ಏಕಜೀವವಾಗಿದ್ದುದು ರಾಮಚಂದ್ರನಿಗೆ ಗೊತ್ತಿತ್ತು. ಈಗ ಏಕಾಕಿಯಾದ ಅವನನ್ನು ನೋಡುತ್ತಲೇ ಶ್ರೀರಾಮನಿಗೆ ತಂದೆಯ ನೆನಪಾಯಿತು. ಕಣ್ಣು ಅಶ್ರುಪೂರ್ಣವಾದುವು. ಸುಮಂತನಿಗೂ ದುಃಖ ತಡೆಯಲಾಗಲಿಲ್ಲ. ಆತನೂ ಅತ್ತುಬಿಟ್ಟ.

ರಾಮಚಂದ್ರನ ಸೇವೆ ಮಾಡಲು ಭರತನಿಗೆ ಮೊದಲನೆಯ ಅವಕಾಶ ಸಿಕ್ಕಂತಾಯಿತು. ಆತ ಓಡುತ್ತ ಹೋಗಿ ನೀರನ್ನು ತಂದು ಕೊಟ್ಟ; ಅಣ್ಣಾ, ಕಣ್ಣೀರಿನಿಂದ ಕಲುಷಿತವಾದ ಮುಖವನ್ನು ತೊಳೆದುಕೋ— ಎಂದು ಬಿನ್ನವಿಸಿದ.

ಭರತನ ಬಂಧು ಪ್ರೇಮ ಎಲ್ಲರ ಹೃದಯವನ್ನು ಸೆಳೆದುಬಿಟ್ಟಿತು. ಆದರೆ, ಈ ಸೇವಾ ಶುಶ್ರೂಷೆಗಳಿಗೆ, ಸೋದರ ಸ್ನೇಹದ ಮಾತುಗಳಿಗೆ ಕೊನೆಯೆಲ್ಲಿ? ಸುಮಂತ ಮೂಲ ವಿಷಯದ ಕಡೆಗೆ ಅವರನ್ನು ಸೆಳೆದ—

"ಶ್ರೀರಾಮಚಂದ್ರಾ, ಈಗ ಪಟ್ಟಾಭಿಷೇಕವನ್ನು ಯಾರಿಗೆ ಮಾಡಬೇಕು?"

"ಕೈಕೇಯಿ ತಾಯಿ ಹೇಳಿದವರಿಗೆ!" ರಾಮಚಂದ್ರ ನಿರ್ವಿಕಾರವಾಗಿ ಹೇಳಿದ.

" ಅಣ್ಣಾ, ಗಾಯದ ಮೇಲೆ ಬರೆ ಎಳೆಯಬೇಡ. ನೀನು ಹುಟ್ಟಿದ ವಂಶದಲ್ಲಿಯೇ ನಾನೂ ಹುಟ್ಟಿರುವೆ. ಅದೇ ತಂದೆಯಿಂದಲೇ ನನಗೂ ಜನ್ಮ ಬಂದಿದೆ. ತಾಯಿಯ ತಪ್ಪಿನಿಂದ ಮಕ್ಕಳನ್ನು ಆಳೆಯ ಬಾರದು. ನಿನ್ನಲ್ಲಿ ವರವನ್ನು ಬೇಡಲು ಬಂದಿರುವೆ. ದಯಪಾಲಿಸಿ ಕೃತಾರ್ಥನನ್ನಾಗಿ ಮಾಡಬೇಕು " ಭರತ ದೀನವಾಣಿಯಿಂದ ಬೇಡಿ ಕೊಂಡ.

ಆತನ ಕರುಣೆಯ ನುಡಿಗಳು ಸೀತಾದೇವಿಯ ಮಿದುವೆದೆ ಯನ್ನು ಕರಗಿಸಿದುವು. ಆಕೆ ನಡುವೆಯೇ ಮಾತನಾಡಿದಳು— ಆರ್ಯಪುತ್ರಾ, ಭರತ ಕುಮಾರನ ಕರುಳಿನ ನುಡಿಗಳಿಂದ ನನಗೆ ಕಳವಳವೆನಿಸುತ್ತಿದೆ. ನೀವೇನು ಆಲೋಚಿಸುತ್ತಿದ್ದೀರಿ ? "

" ಸೀತೇ, ಇಂಥ ಅಲೌಕಿಕ ಗುಣಗಳ ನಿಧಿಯನ್ನು ನೋಡುವ ಭಾಗ್ಯ ನನ್ನ ತಂದೆಗೆ ಇಲ್ಲದಾಯಿತಲ್ಲ ! ಇಂತಹ ಪುತ್ರರತ್ನವನ್ನು ಬಿಟ್ಟು ಪರಲೋಕಕ್ಕೆ ತೆರಳಿದರಲ್ಲ ! ಎಂದು ಆಲೋಚಿಸುತ್ತಿದ್ದೇನೆ. " ರಾಮ ತನ್ನ ವಿಶಾಲ ಹೃದಯಕ್ಕೆ ತಕ್ಕ ಉತ್ತರವನ್ನು ಕೊಟ್ಟ. ಹಿಗೆಯೇ ಭರತನನ್ನು ಕುರಿತು— ತಮ್ಮಾ ನಿನ್ನ ನಡೆನುಡಿಗಳಿಂದ ನನಗೆ ಬಹಳ ಆನಂದವಾಗಿದೆ. ನಿನ್ನ ಅಂತರಂಗದ ನಿರ್ಮಲತೆ ಯನ್ನು ಕಂಡುಕೊಂಡಿರುವೆ. ನಿನ್ನ ಮಾತುಗಳಿಗೆ ಮಾರುಹೋಗಿ ದ್ದೇನೆ. ನಿನ್ನ ಲೋಕವಿಖ್ಯಾತ ಗುಣಗಳು ನನ್ನನ್ನು ಗೆದ್ದುಕೊಂಡಿವೆ. ಆದರೆ, ಭರತನನ್ನು ರಾಜನನ್ನು ಮಾಡಬೇಕೆಂದು ತಂದೆಯವರ ಹೇಳಿಕೆಯಿತ್ತು. ಅದು ಸುಳ್ಳಾಗಬಾರದಲ್ಲವೇ? ನೀನೇ ಹೇಳು— ನಿನ್ನಂತಹ ಧರ್ಮಧುರಂಧರ ಪುತ್ರನನ್ನು ಹೆತ್ತ ತಂದೆ ಸುಳ್ಳುಗಾರ ನಾಗಬೇಕೇ ? "

" ನಿಮ್ಮ ವನವಾಸ ಮುಗಿಯುವ ವರೆಗೆ ಇಲ್ಲಿಯೇ ಪಾದಸೇವೆ ಯನ್ನು ಮಾಡಿಕೊಂಡಿರುವೆ. ಒಪ್ಪಿಗೆ ಕೊಡುವಿರಾ ? " ಭರತ ವಿನಯದಿಂದ ಕೇಳಿದ.

" ಹಾಗೆ ಹಟಮಾಡಬೇಡ ತಮ್ಮಾ ! ತಂದೆಯವರು ತಮ್ಮ

ಸತ್ಯವಂತಿಕೆಯ ಬಲದಿಂದ ಅಖಂಡವಾಗಿ ಸ್ವರ್ಗಸುಖವನ್ನು ಅನುಭವಿಸುವಂತಾಗಲಿ. ನೀನು ಅವರ ಇಚ್ಛೆಯಂತೆ ಕೋಸಲ ರಾಜ್ಯವನ್ನು ಆಳುವುದಿಲ್ಲವೆಂದರೆ....ಅವರ ವಚನವನ್ನು ಸುಳ್ಳು ಮಾಡುವದಾದರೆ.... ಇಗೋ ನನ್ನ ಆಣೆಯಿದೆ." ರಾಮುಚಂದ್ರ ನಿಖರವಾಗಿ ಹೇಳಿಬಿಟ್ಟ.

"ಅಣ್ಣಾ, ನನ್ನ ಬಾಯಿಗೆ ಬೀಗವನ್ನು ಹಾಕಿಬಿಟ್ಟೆಯಲ್ಲ! ಆಗಲಿ. ನಿನ್ನ ಅಪ್ಪಣೆಯನ್ನು ಮೀರುವುದಿಲ್ಲ. ಹದಿನಾಲ್ಕು ವರುಷಗಳ ವರೆಗೂ ರಾಜ್ಯವನ್ನು ಕಾಪಾಡುತ್ತೇನೆ. ಆದರೆ ಅದಕ್ಕೆ ನನ್ನದೊಂದು ಕಟ್ಟು ಇದೆ. ಅದನ್ನು ಪೂರಯಿಸಬೇಕು! ನಿಮ್ಮ ಪೂಜ್ಯ ಪಾದಗಳ ಪಾದುಕೆಗಳನ್ನು ನನಗೆ ದಯಪಾಲಿಸಿರಿ. ಅವುಗಳನ್ನು ಸಿಂಹಾಸನದ ಮೇಲಿಡುವೆ. ಅವುಗಳಿಗೆ ಆಧೀನನಾಗಿ ರಾಜ್ಯಕಾರ್ಯಗಳನ್ನು ನಡೆಸುವೆ." ಭರತ ಮತ್ತೆಯೂ ನಮ್ರನಾಗಿ ಕೇಳಿದ.

ರಾಮುಚಂದ್ರನ ಎದೆಗಡಲು ಉಕ್ಕಿ ಬಂದಿತು. ಆ ಹಾ ಹಾ! ಭರತಾ, ನಾನು ಅದೆಷ್ಟೋ ಕಾಲ ಕಷ್ಟಪಟ್ಟು ಕೀರ್ತಿಯನ್ನು ಗಳಿಸಿದೆ. ನೀನು ಒಂದೇ ಒಂದು ಕ್ಷಣದಲ್ಲಿ ಅದಕ್ಕಿಂತ ಇಮ್ಮಡಿ ಮುಮ್ಮಡಿ ಯಶಸ್ಸನ್ನು ಸಂಪಾದಿಸಿಬಿಟ್ಟೆಯಲ್ಲ! ಎಷ್ಟೊಂದು ಭಕ್ತಿ ನಿನ್ನದು ಅಣ್ಣನಲ್ಲಿ!" ಆನಂದಾಶ್ರುಗಳು ಉಕ್ಕುತ್ತಿದ್ದವು ರಾಮಚಂದ್ರನ ಕಣ್ಣುಗಳಲ್ಲಿ.

ಭರತನ ಬೇಡಿಕೆಯನ್ನು ಪೂರಯಿಸಲು ಸೀತೆಯೂ ರಾಮನನ್ನು ಒತ್ತಾಯ ಪಡಿಸಿದಳು. ರಾಮುಚಂದ್ರ ತನ್ನ ಪಾದುಕೆಗಳನ್ನು ಕೊಟ್ಟ, ಮತ್ತು ಭರತನ ಇಚ್ಛೆಯಂತೆ ಪಟ್ಟಾಭಿಷೇಕ ಮೊದಲಾದ ಕಾರ್ಯಗಳನ್ನು ಮಾಡಬೇಕೆಂದು ಸುಮಂತನಿಗೆ ತಿಳಿಸಿದ; ಹಾಗೆಯೇ— ರಾಜ್ಯಕಾರ್ಯವನ್ನು ಸ್ವಲ್ಪವೂ ಅಲಕ್ಷಿಸಬಾರದು. ನೀನು ಇಂದೇ ತಿರುಗಿ ಹೋಗು— ಎಂದು ಭರತನಿಗೆ ಅಪ್ಪಣೆ ಮಾಡಿದ.

ಪಾದುಕೆಗಳು ದೊರೆತುದರಿಂದ ಭರತನಿಗೆ ಪರಮಾನಂದವಾಯಿತು. ಅವುಗಳನ್ನು ತಲೆಯ ಮೇಲಿಟ್ಟುಕೊಂಡು ಕುಣಿದಾಡಿದ.

ಪ್ರಜೆಗಳು ಈಗ ಶ್ರೀರಾಮನ ತಿರುಗಿ ಬರುವಿಕೆಯನ್ನು ನಿರೀಕ್ಷಿಸುತ್ತಿರಬಹುದು. ಅವರಿಗೆ ಆತನ ಪವಿತ್ರ ಪಾದುಕೆಗಳ ದರ್ಶನದಿಂದ ಸ್ವಲ್ಪಾದರೂ ಸಮಾಧಾನವಾದೀತು; ತನ್ನ ರಾಜ್ಯ ಭಾರವೂ ಸರಳವಾಗಿ ಸಾಗೀತು........... ಮುಂತಾಗಿ ವಿಚಾರಿಸುತ್ತ ಅಣ್ಣ, ಅತ್ತಿಗೆಯರಿಗೆ ನಮಸ್ಕಾರ ಮಾಡಿದ.

ಅವರೆಲ್ಲರೂ– ವಿಜಯೀಭವ, ಚಿರಂಜೀವ– ಎಂದು ಶುಭಾಶೀರ್ವಾದ ಮಾಡಿದರು. ಆಶ್ರಮ ದ್ವಾರವನ್ನು ದಾಟುವ ವರೆಗೂ ಮೂವರೂ ಅವನನ್ನು ಹಿಂಬಾಲಿಸಿದರು. ಭರತ ಆನಂದ ಭರದಲ್ಲಿ ರಥವನ್ನು ಏರಿದ; ಅಯೋಧ್ಯೆಯ ವರೆಗೂ ನಿಟ್ಟೋಟದಿಂದ ಓಡಿಸ ಹತ್ತಿದ. ಪಾದುಕಾ ಪಟ್ಟಾಭಿಷೇಕವನ್ನು ಯಾವಾಗ ನಡೆಸುವೆನೋ ಎಂದು ಆತುರ ಅವನಿಗೆ.

ಆಶ್ರಮದಲ್ಲಿ ಇರುವಾಗ ಸೀತಾದೇವಿ ತಾಪಸಿಯರಂತೆಯೇ ತನ್ನ ದಿನಚರಿಯನ್ನು ಸಾಗಿಸುತ್ತಿದ್ದಳು. ನಿತ್ಯವೂ ಆಶ್ರಮವನ್ನು ಉಡುಗುವುದು, ಸಾರಣೆ– ಕಾರಣೆಗಳಿಂದ ಅಲಂಕರಿಸುವುದು, ಹೂಮಾಲೆ ತೋರಣಗಳನ್ನು ಕಟ್ಟುವುದು........ ಮುಂತಾಗಿ ಎಲ್ಲ ಕೆಲಸಗಳನ್ನು ಕೈಮುಟ್ಟ ಮಾಡುತ್ತಿದ್ದಳು.

ಒಂದು ದಿನ ಬೆಳಗಿನ ಎಲ್ಲ ಕೆಲಸಗಳನ್ನು ಮುಗಿಸಿದಳು. ಆಗ ರಾಮಚಂದ್ರ ಎಲ್ಲಿಯೋ ಹೊರಗೆ ಹೋಗಿದ್ದ. ಲಕ್ಷ್ಮಣ ಕುಲಪತಿಗಳ ದರ್ಶನಕ್ಕೆ ತೆರಳಿದ್ದ. ಸೀತಾದೇವಿ ಪತಿಯ ಹಾದಿಯನ್ನು ನೋಡುತ್ತಿದ್ದಳು.

ತುಸು ಹೊತ್ತಿನ ಮೇಲೆ ರಾಮಚಂದ್ರ ಆಶ್ರಮಕ್ಕೆ ಮರಳಿದ. ಆಶ್ರಮದ ಕೈದೋಟದಲ್ಲಿ ಜಾನಕಿ ಮಾಡಿದ ಓರಣವನ್ನು ನೋಡಿದ: ಮರಗಳ ಪಾತೆಗಳಲ್ಲಿ ನೀರು ತುಳುಕುತ್ತಿದ್ದುವು. ಹೂ–ಗಿಡ–ಬಳ್ಳಿ ನೀರುಣಿಸಿದುದರಿಂದ ಅವು ಚಕಪಕ ನಲಿಯುತ್ತಿದ್ದುವು, ನಗುತ್ತಿದ್ದುವು. ಆಶ್ರಮದ್ವಾರ ತಳಿರು–ತೋರಣಗಳಿಂದ ಸಿಂಗಾರವಾಗಿತ್ತು. ಆ ಚೆಲುವಿಕೆ ರಾಮಚಂದ್ರನನ್ನು ತಣಿಸಿತು. ಆದರೆ ಕೆಲಹೊತ್ತು

ಮಾತ್ರ. ಆತನ ಮನಸ್ಸಿನಲ್ಲಿ ಯಾವುದೋ ದುಗುಡ ತುಂಬಿತ್ತು. ಮುಖದ ಮೇಲೆ ಚಿಂತೆ ಮೂಡಿತ್ತು.

ಮೈಥಿಲೀ ಆನಂದದಿಂದ ಇದ್ದೀಯಾ ?– ಎನ್ನುತ್ತ ಆಶ್ರಮವನ್ನು ಸಮೀಪಿಸಿದ ರಾಮಚಂದ್ರ.

ನಾನು ಆನಂದದಿಂದ ಇರುವೆ. ಆದರೆ ನಿಮ್ಮ ಮೋರೆಯ ಮೇಲೆ ಚಿಂತೆ ಮೂಡಿದೆಯಲ್ಲ! ಏಕೆ! –ಸೀತೆ ಪುನಃ ಪ್ರಶ್ನೆ ಮಾಡಿದಳು.

"ಸೀತೇ, ತಂದೆಯ ಅಗಲಿಕೆಯಿಂದ ಹೃದಯಕ್ಕಾದ ಗಾಯ ಇನ್ನು ಮಾಯ್ದಿಲ್ಲ. ಅದರ ಮೇಲೆಯೇ ಬರೆ ಕೊಡುತ್ತಲಿದೆ ನನ್ನ ದುರ್ದೈವ!" ನಿಟ್ಟುಸಿರುಗರೆದು ರಾಮ ಮಾತನ್ನು ಮುಂದುವರಿಸಿದ. ನಾಳೆ ತಂದೆಯವರ ವಾರ್ಷಿಕ ಶ್ರಾದ್ಧವಿದೆ. ನಮ್ಮ ನಮ್ಮ ಶಕ್ತಿಗನುಸಾರವಾಗಿ ಪಿತೃಗಳಿಗೆ ತರ್ಪಣ ಕೊಡಬೇಕು. ಅದನ್ನು ಹೇಗೆ ಪೂರಯಿಸಬೇಕೆಂಬುದೇ ನನ್ನ ಚಿಂತೆ. ವನವಾಸಿಗಳಾದ ನಮ್ಮ ಸಾಧನ – ಸಾಮಗ್ರಿಗಳ ಕಲ್ಪನೆ ಪಿತೃಗಳಿಗಿದೆ. ನಾವು ಏನನ್ನು ಕೊಟ್ಟರೂ ಅವರು ಸಂತುಷ್ಟರಾಗುತ್ತಾರೆ. ಆದರೆ ತಂದೆಯವರ ಯೋಗ್ಯತೆಯನ್ನು ಅರಿತು ನಾವು ಶ್ರಾದ್ಧ ಮಾಡಬೇಕಲ್ಲವೇ ?"

"ಇದಕ್ಕೇಕೆ ಚಿಂತೆ ? ಭರತಕುಮಾರ ಅಲ್ಲಿ ಬೇಕಾದಷ್ಟು ವೈಭವದಿಂದ ಶ್ರಾದ್ಧವನ್ನು ನೆರವೇರಿಸುತ್ತಾನೆ. ನಾವು ನಮ್ಮ ಸ್ಥಿತಿಗೆ ತಕ್ಕಂತೆ ಹಣ್ಣು–ಹಂಪಲುಗಳಿಂದ ಮುಗಿಸೋಣ" ಸೀತೆ ಸ್ವಾಭಾವಿಕ ರೀತಿಯಲ್ಲಿ ಹೇಳಿದಳು.

"ಹಾಗಲ್ಲ ಸೀತೇ. ಹುಲ್ಲು ಹಾಸಿಗೆಯ ಮೇಲೆ ನಾವು ಹಣ್ಣು-ಹಂಪಲುಗಳನ್ನು ಇಡಬಹುದು. ಅದನ್ನು ನೋಡಿದರೆ, ತಂದೆಯವರು ಸ್ವರ್ಗ ಸುಖದಲ್ಲಿದ್ದರೂ ಕಣ್ಣೀರು ಸುರಿಸಬಹುದು." ರಾಮ ಮತ್ತಿಷ್ಟು ಖಿನ್ನನಾದ.

ಆ ಹೊತ್ತಿಗೆ ಸರಿಯಾಗಿ ರಾವಣ ಮುನಿವೇಷದಿಂದ ಆಶ್ರಮದ ಹತ್ತಿರಕ್ಕೆ ಬಂದ; ನಾನು ಅತಿಥಿ ಬಂದಿರುವೆ. ಯಾರಿದ್ದೀರಿ— ಎಂದು ಕವಡು ದನಿಯಿಂದ ಕೂಗಿದ.

ರಾಮುಚಂದ್ರ ಹೊರಗೆ ಬಂದ. ಕಪಟ ರಾವಣನ ವೇಷ – ಭೂಷಣಗಳನ್ನು ನೋಡಿ ಮೋಸ ಹೋದ. ನಿಜವಾದ ಯತಿಯೇ ಎಂದು ಆತನನ್ನು ಭಯ-ಭಕ್ತಿಯಿಂದ ಸ್ವಾಗತಿಸಿದ. ಆಶ್ರಮದೊಳಕ್ಕೆ ಕರೆದೊಯ್ದು. ಅತಿಥಿ ಪೂಜೆಯನ್ನು ಮಾಡಲು ಸೀತೆಗೆ ಹೇಳಿದ. ಆದರೆ ರಾವಣ— ಬೇರೆಯವರ ನೆರಳು ಕೂಡ ನನ್ನನ್ನು ಮುಟ್ಟ ಲಾಗದು. ನೀವು ಪೂಜೆಯನ್ನು ಮಾಡಬೇಕಾಗಿಲ್ಲ. ನಿಮ್ಮ ಮಧುರ ವಾದ ಮಾತುಗಳಿಂದಲೇ ನಾನು ಸಂತುಷ್ಟನಾಗಿದ್ದೇನೆ. ನನ್ನ ವಿದ್ಯಾ-ತಪಸ್ಸಾಧನೆಗಳು ಅಗಾಧವಾಗಿವೆ. ನನ್ನದು ಕಾಶ್ಯಪಗೋತ್ರ. ಸಾಂಗೋಪಾಂಗ ವೇದಾಭ್ಯಾಸ ಮಾಡಿರುವೆ. ಹಾಗೆಯೇ ಮಾನ ವೀಯ ಧರ್ಮಶಾಸ್ತ್ರ, ಮಾಹೇಶ್ವರ ಯೋಗಶಾಸ್ತ್ರ, ಬೃಹಸ್ಪತಿಯ ಅರ್ಥ ಶಾಸ್ತ್ರ, ಮೇಧಾತಿಥಿಯ ನ್ಯಾಯಶಾಸ್ತ್ರ ಮತ್ತು ಪ್ರಾಚೇತಸನ ಶ್ರಾದ್ಧ ಕಲ್ಪ ಮುಂತಾದುವನ್ನು ಅರಗಿಸಿಕೊಂಡಿರುವೆ." ಕಪಟ ನಟನೆ ಯನ್ನು ಒಳಿತಾಗಿಯೇ ಮಾಡಿದ.

ಶ್ರಾದ್ಧ ಶಬ್ದವನ್ನು ಕೇಳುತ್ತಲೇ ರಾಮುಚಂದ್ರನ ಆಸೆ ಕೆರಳಿತು.

"ಪೂಜ್ಯರೇ, ಪಿಂಡದಾನದ ಸಮಯದಲ್ಲಿ ಪಿತೃಗಳನ್ನು ಯಾವ ಯಾವ ವಸ್ತುಗಳಿಂದ ತೃಪ್ತಿಪಡಿಸಬೇಕು ?" ಕುತೂಹಲದಿಂದ ಕೇಳಿದ.

"ಯಾವ ವಸ್ತುವಾದರೂ ಸರಿಯೇ. ಶ್ರದ್ಧೆಯಿಂದ ಅರ್ಪಿ ಸಿದ್ದೆಲ್ಲ ಶ್ರಾದ್ಧವೇ!" ರಾವಣ ತತ್ತ್ವಜ್ಞಾನಿಯಂತೆ ನಟಿಸಿದ.

"ಅದು ಸರಿಯೇ– ಆದರೂ ಆ ವಸ್ತುಗಳನ್ನು ವಿವರವಾಗಿ ತಿಳಿಯ ಬಯಸುತ್ತೇನೆ." ರಾಮನ ಮಾತಿನಲ್ಲಿ ಪಿತೃನಿಷ್ಠೆ ತೋರು ತ್ತಿತ್ತು.

" ಕೇಳಬೇಕು. ಹುಲ್ಲುಜಾತಿಯಲ್ಲಿ ಕರಿಕೆ, ವನಸ್ಪತಿಗಳಲ್ಲಿ ಎಳ್ಳು, ಶಾಕಗಳಲ್ಲಿ ಕಲಾಯ (ವಟಾಣಿ), ಪಕ್ಷಿಗಳಲ್ಲಿ ವಾರ್ಧೀಣಸ, ಪಶುಗಳಲ್ಲಿ ಗೋವು ಇಲ್ಲವೆ ಖಡ್ಗಮೃಗ ಅಥವಾ........ ಇವುಗಳನ್ನು ಕೊಡಬಹುದು."

"ಅಥವಾ....... ಎಂದು ಹೆಸರನ್ನೇ ಹೇಳಲಿಲ್ಲವಲ್ಲ. ಅದೇಕೆ ಸಂಕೋಚ ಪಟ್ಟುಕೊಂಡಿರಿ?" ರಾಮು ಕುತೂಹಲಿಯಾಗಿ ಕೇಳಿದ.

"ಅದನ್ನು ಶೂರತನದಿಂದ ಸಂಪಾದಿಸಬೇಕಾಗುತ್ತಿದೆ."

ರಾಮನ ಶೌರ್ಯವನ್ನು ಕೆಣಕಿದಂತೆ ನುಡಿದ ರಾವಣ.

"ಪೂಜ್ಯನೇ, ಅಥವಾ....... ಎಂದುದನ್ನು ಹೇಳಲೇಬೇಕು. ಅದನ್ನು ತಂದೇ ತೀರುವೆ. ತಪಸ್ಸಿನಿಂದ ಸಾಧ್ಯವಾಗದುದನ್ನು ಬಾಣದ ಬಲದಿಂದ, ಬಾಣದಿಂದ ಸಾಧ್ಯವಾಗದುದನ್ನು ತಪಸ್ಸಿನಿಂದ ಪಡೆಯುವೆ. ಈ ಎರಡೇ ನನ್ನ ಸಂಪಾದನೆಯ ಮಾರ್ಗಗಳು. ಇವೆರಡರಲ್ಲಿ ಯಾವುದೇ ಒಂದರಿಂದ ಏನೆಲ್ಲವನ್ನೂ ಸಾಧ್ಯಮಾಡಿಕೊಳ್ಳುವೆ. ಬೇಗನೆ ಆ ಶೌರ್ಯ ಸಂಪಾದನೀಯ ವಸ್ತುವಿನ ಹೆಸರನ್ನು ಹೇಳಬೇಕು." ರಾಮನ ಆಗ್ರಹ ಹೆಚ್ಚಾಯಿತು.

ಕಪಟ ರಾವಣನಿಗೆ ಕಡು ಹರುಷವಾಯಿತು. ಸೀತೆಯನ್ನು ಕದ್ದು ಒಯ್ಯುವುದಕ್ಕೆ ಇದೇ ತಕ್ಕ ಹಂಚಿಕೆ, ಎಂದುಕೊಂಡ. ತನ್ನ ಸಮಯವನ್ನು ಸಾಧಿಸುವುದಕ್ಕಾಗಿ ರಾಮನನ್ನು ದೂರ– ಅತಿದೂರ– ಕಳಿಸಬೇಕಾಗಿತ್ತು. ಅದಕ್ಕಾಗಿ ತುಸು ಹೊತ್ತು ವಿಚಾರದಲ್ಲಿ ತೊಡಗಿದಂತೆ ತೋರಿಸಿದ. ರಾಮನ ಆತುರ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು. ರಾವಣ ಒಮ್ಮೆ ಕಣ್ಣು ಮುಚ್ಚಿದ; ಮತ್ತೆ ತೆರೆದ. ಜ್ಞಾನದೃಷ್ಟಿಯಿಂದ ಹೇಳುತ್ತಾನೋ ಎನ್ನುವಂತೆ ಬಾಯಿಬಿಟ್ಟ—

"ಹಿಮಾಲಯ ಪರ್ವತದ ಏಳನೆಯ ಶಿಖರದ ಮೇಲೆ ಚಿನ್ನದ ಮೈಯ ಚಿಗರೆಗಳಿವೆ. ಅವು ಗಾಳಿಗಿಂತ ಚುರುಕು, ವೈಡೂರ್ಯದಂತೆ ಶಾಮವರ್ಣದ ಬೆನ್ನುಳ್ಳವು; ನಿತ್ಯವೂ ಶಿವನ ಜಡೆಯ ಗಂಗಾದೇವಿಯಿಂದ ಬೀಳುವ ನೀರನ್ನೇ ಕುಡಿಯುತ್ತಿವೆ. ವೈಖಾನಸ, ವಾಲಖಿಲ್ಯ, ನೈಮಿಷ ಮೊದಲಾದ ಮಹರ್ಷಿಗಳು ಧ್ಯಾನ ಮಂತ್ರದಿಂದಲೇ ಅವುಗಳನ್ನು ಕರೆಯುತ್ತಾರೆ; ಆ ಮಾಂಸದಿಂದಲೇ ಪಿತೃಗಳಿಗೆ ಪಿಂಡದಾನ ಮಾಡುತ್ತಾರೆ. ಮಕ್ಕಳು ಹೀಗೆ ದಾನ ಮಾಡುವುದರಿಂದ ಪಿತೃಗಳಿಗೆ ಪುನಃ ಯೌವನ ಬರುತ್ತಿದೆ. ಅವರು ತೇಜೋವಂತರಾಗಿ

ಸ್ವರ್ಗಕ್ಕೆ ಹೋಗುತ್ತಾರೆ. ಅಲ್ಲಿ ದೇವತೆಗಳ ಸಂಗಡ ವಿಮಾನಗಳಲ್ಲಿ ಸಂಚರಿಸುತ್ತಾರೆ. ಇಷ್ಟೇ ಅಲ್ಲ; ಅವರನ್ನು ಅಧೋಗತಿಗೆ ಎಳೆಯುವ ಬೇರೆ ಯಾವ ಆಸೆ–ಆಮಿಷಗಳೂ ಅವರನ್ನು ಕಾಡುವುದಿಲ್ಲ."

ಇದನ್ನು ಕೇಳುತ್ತಲೇ ರಾಮಚಂದ್ರನ ಮೈ ಉಬ್ಬಿತು. ಕೂಡಲೆ ಸೀತಾದೇವಿಯನ್ನು ಕರೆದು ಹೇಳಿದ– ಸೀತೇ, ಈಗೀಂದೀಗಲೇ ಈ ವಿಂಧ್ಯ ಪರ್ವತದ ಗಿಡ – ಬಳ್ಳಿ, ಪಶು – ಪಕ್ಷಿ, ಋಷಿ ಮುನಿಗಳಿಗೆ ಕೊನೆಯ ನಮಸ್ಕಾರ ಹೇಳು. ನಾವು ಬೇಗನೆ ಹಿಮಾಲಯಕ್ಕೆ ಹೋಗೋಣ. ಆ ಕಾಂಚನ ಮೃಗಗಳು ಇರುವಲ್ಲಿಯೇ ವಾಸ ಮಾಡೋಣ. ಹುಂ. ತಡಮಾಡಬೇಡ.

ತನ್ನ ಗುಂಡು ಗುರಿ ತಪ್ಪಿತಲ್ಲ, ಎಂದು ರಾವಣನಿಗೆ ಖೇದ ವಾಯಿತು. ಆದರೂ ತೋರಗೊಡಲಿಲ್ಲ. ಮತ್ತೆ ಸಂಭಾವಿತ ತನ ವನ್ನು ನಟಿಸುತ್ತಲೇ— ಇಂತಹ ದುರಾಶೆ ಒಳಿತಲ್ಲ. ಆ ಮೃಗಗಳು ಮಾನವರ ಕಣ್ಣಿಗೆ ಕಾಣುವುದಿಲ್ಲ. ಸುಮ್ಮನೆ ಅಲ್ಲಿಗೆ ಹೋಗುವುದ ರಿಂದ ಏನು ಉಪಯೋಗ? –ಎಂದು ಅವರ ಪ್ರಯಾಣಕ್ಕೆ ತಡೆ ಹಾಕಿದ.

"ಪೂಜ್ಯರೇ, ಈ ಬಗೆಗೆ ತಾವೇನೂ ಶಂಕೆಗೊಳ್ಳುವ ಕಾರಣ ವಿಲ್ಲ. ಆ ಕಾಂಚನ ಮೃಗಗಳು ಹಿಮಾಲಯದಲ್ಲಿ ಇದ್ದರೆ ಸಾಕು. ನನ್ನ ಧನುಷ್ಟಂಕಾರವನ್ನು ಕೇಳುತ್ತಲೇ ಪರ್ವತರಾಜ ಆ ಚಿನ್ನದ ಚಿಗರೆ ಗಳನ್ನು ನನಗೆ ತಂದು ಒಪ್ಪಿಸಬೇಕು; ಇಲ್ಲವೆ ನನ್ನ ಬಾಣಗಳಿಗೆ ಬಲಿ ಯಾಗಿ ಕ್ರೌಂಚಪರ್ವತದಂತೆ ಛಿದ್ರ ಛಿದ್ರವಾಗಬೇಕು.

ರಾಮನ ಶೌರ್ಯಾವೇಶ ರಾವಣನಿಗೆ ಸಹನವಾಗಲಿಲ್ಲ. ಆದರೂ ಆ ವೇಳೆಯಲ್ಲಿ ವೇಷಕ್ಕೆ ತಕ್ಕಂತೆ ಸೌಮ್ಯತೆಯನ್ನೇ ನಟಿಸಬೇಕಾ ಗಿತ್ತು. ತನ್ನ ಮಾಯೆಯಿಂದ ಚಿನ್ನದ ಚಿಗರೆಯನ್ನು ಹುಟ್ಟಿಸಿದ; ಅದು ತುಸು ದೂರದಲ್ಲಿ ತಿರುಗಾಡುತ್ತಿರುವಂತೆ ಮಾಡಿದ.

"ರಾಮಚಂದ್ರಾ, ನಿನ್ನ ಶೌರ್ಯ – ಸಾಮರ್ಥ್ಯಗಳಿಗೆ ಹಿಮ ಪರ್ವತರಾಜ ಹೆದರಿದನೋ ಅಥವಾ ಪ್ರಸನ್ನನಾದನೋ! ಅದು ಅಲ್ಲಿ

ನೋಡು. ಕಾಂಚನ ಮೃಗವನ್ನು ನಿನ್ನ ಕಾರ್ಯಕ್ಕಾಗಿ ಕಳಿಸಿಕೊಟ್ಟಿದ್ದಾನೆ; ನಿನ್ನನ್ನು ಸಂತಯಿಸಿದ್ದಾನೆ" ಎಂದ ರಾವಣ.

ತನ್ನ ತಂದೆಯ ಪುಣ್ಯ ವಶದಿಂದ ಇಂತಹ ಅಲಭ್ಯವೂ ಲಭ್ಯವಾಯಿತೆಂದು ರಾಮನಿಗೆ ಆನಂದವಾಯಿತು. ಆ ಮೃಗವನ್ನು ಹಿಡಿ ತರುವುದಕ್ಕೆ ಲಕ್ಷ್ಮಣನನ್ನು ಕಳಿಸಬೇಕಾಗಿತ್ತು. ಆದರೆ ಲಕ್ಷ್ಮಣ ಕುಲಪತಿಗಳ ಕಡೆಗೆ ಹೋಗಿದ್ದ. ಕಡೆಗೆ ರಾಮನೇ ಹೋಗಬೇಕಾಯಿತು, ಕಾಂಚನ ಮೃಗವನ್ನು ಕೊಂಡು ಬರುವುದಕ್ಕೆ.

ರಾಮಚಂದ್ರನ ಶೌರ್ಯ–ಧೈರ್ಯ, ಧನುರ್ವಿದ್ಯಾ ನಿಪುಣತೆ, ಪಿತೃಭಕ್ತಿಗಳನ್ನು ಕಂಡು ಬೆರಗಾದ ರಾವಣ. 'ರಾಮ' ಈ ಎರಡಕ್ಷರಗಳಲ್ಲಿ ಇಡಿಯ ಸಂಸಾರವೇ ಸೇರಿಕೊಂಡಿದೆಯೋ ಎಂದು ಕೊಂಡ.

ಅಷ್ಟು ಹೊತ್ತಿಗೆ ರಾಮಚಂದ್ರ ಚಿಗರೆಯ ಬೆನ್ನಟ್ಟಿ ಬಲುದೂರ ಹೋಗಿದ್ದ. ಚಿಗರೆ ಕೈಗೆ ಸಿಕ್ಕದೆ ಮುಂದೆ ಮುಂದೆ ಓಡುತ್ತಿತ್ತು. ಉಪಾಯವಿಲ್ಲದೆ ಅದರ ಮೇಲೆ ಬಾಣವನ್ನು ಬಿಟ್ಟ. ಅದು ಗುರಿ ತಪ್ಪಿಸಿ ಜಿಗಿದು ಹೋಯಿತು. ರಾಮಚಂದ್ರ ಮತ್ತೆ ಅದರ ಬೆನ್ನಟ್ಟಿದ; ದೂರ ದೂರಕ್ಕೆ ಹೋದ.

ಆಶ್ರಮದಲ್ಲಿ ಸೀತೆ ಒಂಟಿಗಳಾಗಿದ್ದಳು. ಆ ಯತಿಯನ್ನು ಕಂಡಾಗ ಅವಳಿಗೇಕೋ ಎದೆ ನಡುಗುತ್ತಿತ್ತು. ಆಶ್ರಮದ ಒಳಕ್ಕೆ ಹೊರಟಳು. ರಾವಣ ನಿಜರೂಪವನ್ನು ಪ್ರಕಟಿಸಿದ; ಸೀತೇ ನಿಲ್ಲು, ಎಂದು ಆರ್ಭಟಿಸಿದ.

" ಅಯ್ಯೋ ಇವನಾರು ? " ಸೀತೆ ಚಿಟ್ಟನೆ ಚೀರಿದಳು.

" ಯಾರು ಗೊತ್ತಿಲ್ಲವೇ ? ಯುದ್ಧದಲ್ಲಿ ದೇವದಾನವರನ್ನು ಧೂಳೀಪಟ ಮಾಡಿದ, ಶೂರ್ಪನಖಾ ಖರದೂಷಣರ ದುರಂತಗಳನ್ನು ಕೇಳಿ ಸೇಡಿಗೆ ಒಳಗಾದ ಲಂಕಾಧಿಪತಿ ರಾವಣ ನಾನು. ರಾಮನ ಸೊಕ್ಕನ್ನು ಅಣಕಿಸುವುದಕ್ಕಾಗಿ ನಿನ್ನನ್ನೀಗ ಸೆಳೆದೊಯ್ಯುತ್ತೇನೆ. ನಿನ್ನನೀಗ ನನ್ನ ಕೈಯಿಂದ ಯಾರೂ ಬಿಡಿಸಲಾರರು. ಬಿಡಿಸುವವರಿಲ್ಲ ".

" ಆರ್ಯಪುತ್ರಾ, ರಾಮಚಂದ್ರಾ. ಈ ನೀಚ ರಾವಣನಿಂದ ನನ್ನನ್ನು ಪಾರುಮಾಡು; ಬೇಗನೆ ಬಾ ರಾಮಚಂದ್ರಾಽಽ ! " ಸೀತೆ ಗೋಳಾಡಿದಳು.

" ಸೀತೇ, ನನ್ನ ಪರಾಕ್ರಮ ನಿನಗೆ ತಿಳಿದಿಲ್ಲವೇ ? ದೇವ ಲೋಕದಲ್ಲಿಯ ಇಂದ್ರ, ಕುಬೇರ, ಸೂರ್ಯ, ಚಂದ್ರ, ಯಮಧರ್ಮ ಇವರೆಲ್ಲರನ್ನೂ ಹಣ್ಣು ಹಣ್ಣು ಮಾಡಿಬಿಟ್ಟಿದ್ದೇನೆ ಅವರಾದರೂ ನಿನ್ನ ಬೆಂಬಲಕ್ಕೆ ಬರುವದಿಲ್ಲ. ಇನ್ನು ನಿನ್ನ ರಾಮ ಲಕ್ಷ್ಮಣ— ಅಷ್ಟೇ ಅಲ್ಲ, ಸತ್ತು ಹೋದ ದಶರಥ ಕೂಡ ನಿನ್ನನ್ನು ಕಾಪಾಡಲಾರರು. " ರಾವಣ ದರ್ಪದಿಂದ ನುಡಿದ.

" ಥೂ ! ನೀಚಾ, ಈಗಿಂದೀಗಲೇ ಶಾಪಕೊಟ್ಟು ನಿನ್ನನ್ನು ಸುಟ್ಟು ಹಾಕುವೆ ! "

" ಅಬ್ಬಾ, ಬಾಯಿ ಬಂಟತನವೇ ! ಸೀತೇ, ಸೂರ್ಯನೊಡನೆಯೇ ಯುದ್ಧಮಾಡಿ ಗೆದ್ದಿರುವೆ. ಆ ನನ್ನನ್ನು ಸುಟ್ಟು ಹಾಕುವಷ್ಟು ಬಿಸಿ ನಿನ್ನ ಪಾತಿವ್ರತ್ಯದ ಶಾಪದಲ್ಲಿದೆಯೇ ? " ಗಹಗಹಿಸಿ ನಕ್ಕ ರಾವಣ.

ಸೀತೆ ತುಂಬಾ ಬೆದರಿದಳು. ಆರ್ಯಪುತ್ರಾ, ಆರ್ಯಪುತ್ರಾ ಕಾಪಾಡು ! ಹಾ ! ಲಕ್ಷ್ಮಣಾ ಬೇಗ ಬಾ ! ಎನ್ನುತ್ತ ಅತ್ತಿತ್ತ ಓಡಾಡತೊಡಗಿದಳು.

ರಾವಣ ಮುಂದಾಗಿ ಅವಳ ಕೈಯನ್ನು ಬಲವಾಗಿ ಹಿಡಿದ; ಎತ್ತಿಕೊಂಡು ಬಂದು ರಥದಲ್ಲಿ ಇಳಿಸಿದ; ರಥವನ್ನು ಮುಗಿಲ ಮಾರ್ಗದಲ್ಲಿ ವೇಗವಾಗಿ ಬಿಟ್ಟ !

ಸೀತೆ ರಾಮಾ, ರಾಮಚಂದ್ರಾ ! ಲಕ್ಷ್ಮಣಾ ! ಎಂದು ಹಂಬಲಿಸಿ ಕೂಗುತ್ತಿದ್ದಳು.

" ನೀನೇಕೆ ಗಂಟಲು ಹರಿದುಕೊಳ್ಳುವೆ ? ನಾನೇ ಹೇಳುತ್ತೇನೆ ಬೇಕಾದರೆ— ರಾಮನ ಹೆಂಡತಿಯಾದ ಸೀತೆಯನ್ನು ಲಂಕಾಧಿಪತಿ ರಾವಣ ಬಲಾತ್ಕಾರದಿಂದ ಒಯ್ಯುತ್ತಿದ್ದೇನೆ. ರಾಮನಿಗೆ ತನ್ನ ಪರಾ

ಕ್ರಮದಲ್ಲಿ ಅಭಿಮಾನವಿದ್ದರೆ ಬಂದು ಬಿಡಿಸಿಕೊಳ್ಳಲಿ!" ರಾವಣ ಗರ್ವದಿಂದ ಕೂಗಿದ.

ಜಟಾಯು ಎಂಬ ಗರುಡ ಆಕಾಶದಲ್ಲಿ ಸಂಚರಿಸುತ್ತಿತ್ತು. ಅದು ರಾವಣನ ಕೊಬ್ಬಿದ ನುಡಿಗಳನ್ನು ಕೇಳಿ ರಭಸದಿಂದ ಆ ಕಡೆಗೇ ಹಾರಿ ಬಂದಿತು. ಅದರ ವೇಗಕ್ಕೆ ವನವೆಲ್ಲ ಗದಗದ ನಡುಗುತ್ತಿತ್ತು. ರಾಮನ ಪ್ರೀತಿಯ ಭಕ್ತ ಆ ಗೃಧ್ರ ಒಡೆಯನ ಹಿತಕ್ಕಾಗಿ ಅದು ರಾವಣನನ್ನು ಅಡ್ಡಗಟ್ಟಿತು; ತನ್ನ ರೆಕ್ಕೆಯ ಬಡಿತದಿಂದ, ಉಗುರುಗಳ ಪರಚುವಿಕೆಯಿಂದ ಅವನನ್ನು ಗಾಯಗೊಳಿಸಿತು. ರಾವಣನ ಕಣ್ಣು ಕೆಂಪಗಾದುವು. ತನ್ನ ಖಡ್ಗವನ್ನು ಹಿರಿದು ನಿಂತ. ಯುದ್ಧ ಸಾಗಿತು.

ಜಟಾಯು ಸಾಮಾನ್ಯ ಶೂರನಲ್ಲ. ಅವನು ರೆಕ್ಕೆಯನ್ನು ಬೀಸಿದರೆ ದೊಡ್ಡ ದೊಡ್ಡ ಮರಗಳು ಬೇರುದೆರಸೆ ಕಿತ್ತು ಬೀಳುತ್ತಿದ್ದುವು. ಅವನ ಉಗುರುಗಳು ವಜ್ರದಿಂದ ಮಾಡಿದಂತೆ ಬಿರುಸಾಗಿದ್ದುವು. ಈ ಪಕ್ಷಿರಾಜ ದಶರಥನ ಪರಮಮಿತ್ರ; ರಾಮನ ಪರಮಭಕ್ತ. ಜಾನಕಿಗೆ ಬಂದ ವಿಪತ್ತು ತನ್ನದೇ ಎಂದು. ತಿಳಿದು ಜೀವದ ಹಂಗುದೊರೆದು ಕಾದಾಡಹತ್ತಿದ.

ರಾವಣನಂತೂ ಕೊಬ್ಬಿದ ರಾಕ್ಷಸ. ಅವನ ಕೈಯಲ್ಲಿಯ ಖಡ್ಗ ಮಿಂಚಿನಂತೆ ತಳತಳಿಸುತ್ತಿತ್ತು. ಅವನ ವೀರಗರ್ಜನೆ ವನವನ್ನು ನಡುಗಿಸುತ್ತಿತ್ತು.

ಈ ಕೋಲಾಹಲವನ್ನು ಕೇಳಿ ತಪಸ್ವಿಗಳು ಹೊರಗೆ ಬಂದರು; ಕಾದಾಟವನ್ನು ಕಣ್ಣು ಮುಟ್ಟ ನೋಡಿದರು; ಸೀತಾದೇವಿಯ ಕರುಣದ ಕೂಗನ್ನು ಕಿವಿಯಾರೆ ಕೇಳಿದರು. ಆದರೆ ಸಾತ್ತ್ವಿಕರಾದ ಅವರು ಏನನ್ನು ಮಾಡಬಲ್ಲರು? ಅಯ್ಯೋ! ಅನ್ಯಾಯ? ಅನ್ಯಾಯ? ಯಾರಾದರೂ ಸೀತಾದೇವಿಯನ್ನು ಕಾಪಾಡಿರಿ, ಕಾಪಾಡಿರಿ, ಕಾಪಾಡಿರಿ! ಎಂದು ಕೂಗಾಟವನ್ನು ಎಬ್ಬಿಸಿದರು.

ಕಾಪಾಡುವುದಕ್ಕಾಗಿಯೇ ಜಟಾಯು ಕಾಳೆಗವನ್ನು ಆರಂಭಿ

ಸಿದ್ದ. ಅವನು ವೀರಾವೇಶದಿಂದ ರಾವಣನ ಮೇಲೆ ಎರಗಿದ. ತನ್ನ ಬಲವಾದ ಪಕ್ಕಗಳಿಂದ ಅವನನ್ನು ಪಟ ಪಟನೆ ಬಡಿದ. ಉಗುರುಗಳಿಂದ ಪರಚಿ ಪರಚಿ ಗಾಯಮಾಡಿದ. ರಾವಣ ಅದಕ್ಕೆ ಬೆದರುವವನಲ್ಲ. ತನ್ನ ಖಡ್ಗವನ್ನು ಝಳಪಿಸುತ್ತ ಹಕ್ಕಿ ರಾಜನ ಮೇಲೆ ಏಟುಗಳನ್ನು ಹಾಕಹತ್ತಿದ. ಕೊನೆಗೊಮ್ಮೆ ಗುರಿಯಿಟ್ಟ ರೆಕ್ಕೆಯನ್ನು ಕತ್ತರಿಸಿ ಬಿಟ್ಟ ! ಪಕ್ಷಿ ರಾಜನ ಶಕ್ತಿ ಉಡುಗಿ ಹೋಯಿತು. ಅರಣ್ಯದಲ್ಲಿ ಆನೆ ಕಿತ್ತೊಗೆದ ಹೆಮ್ಮರದಂತೆ ನೆಲಕ್ಕೆ ಬಿದ್ದು ಬಿಟ್ಟ ಪಕ್ಷಿರಾಜ !

ರಾವಣನ ವಿಮಾನ ವೇಗದಿಂದ ಮುಂದುವರಿಯಿತು. ಸೀತೆ ಹೆಡೆತುಳಿಸಿಕೊಂಡ ಹಾವಿನಂತೆ ರಾವಣನನ್ನು ಪ್ರತಿಭಟಿಸುತ್ತಿದ್ದಳು. ಆದರೆ ಆ ದಾನವಶಕ್ತಿಯ ಇದಿರಿಗೆ ಅವಳ ಆಟ ನಡೆಯುತ್ತಿರಲಿಲ್ಲ. ಅವಳು ದುಃಖ ಭರದಿಂದ ಕೊರಗಿ ಒಣಗಿದ ಬಳ್ಳಿಯಂತೆ ಕಾಣುತ್ತಿದ್ದಳು. ತಪಸ್ವಿಗಳು ನೊಂದೆದೆಯಿಂದ ಅತ್ತಲೇ ನೋಡುತ್ತಿದ್ದರು. ತಪೋವನದ ಮುನಿಜನರ ತಪಃಸಿದ್ಧಿಯನ್ನೇ ಒಯ್ಯುತ್ತಿದ್ದಾನೆ ರಾವಣ, ಎನಿಸಿತು ಅವರಿಗೆ. 'ಕಾಪಾಡಿರಿ, ಕಾಪಾಡಿರಿ' ಎಂದು ಪುನಃ ಕೂಗಾಡಿದರು. ಆದರೆ ಆ ದಾನವಶಕ್ತಿಯನ್ನು ಎದುರಿಸಲು ಧೀರರು ಯಾರೂ ಬರಲಿಲ್ಲ. ವಿಮಾನ ತುಸು ಹೊತ್ತಿನಲ್ಲಿಯೇ ಕಣ್ಮರೆಯಾಯಿತು. ಸೀತಾದೇವಿ ರಾವಣನ ಸೆರೆಯಲ್ಲಿ ಸಿಕ್ಕು ಬಿದ್ದಳು ? ತಪಸ್ವಿಗಳು ಈ ಸುದ್ದಿಯನ್ನು ತಿಳಿಸಲು ರಾಮಚಂದ್ರನ ಆಶ್ರಮದ ಕಡೆಗೆ ಹೊರಟರು.

ಇತ್ತ ಅಯೋಧ್ಯೆಯಲ್ಲಿ ಭರತ ರಾಮನ ಪಾದುಕೆಗಳಿಗೇ ಪಟ್ಟಾಭಿಷೇಕ ಮಾಡಿದ; ಶ್ರೀರಾಮಚಂದ್ರನ ಹೆಸರಿನಿಂದ ರಾಜ್ಯಭಾರವನ್ನು ಆರಂಭಿಸಿದ. ಆತನಿಗೆ ರಾಜೈಶ್ವರ್ಯದ ವಿಲಾಸ ಭೋಗಗಳು ಬೇಕಾಗಿರಲಿಲ್ಲ. ಒಬ್ಬ ತಾಪಸನಂತೆ ವೇಷಭೂಷಣಗಳನ್ನು ಮಾಡಿಕೊಳ್ಳುತ್ತಿದ್ದ. ಯಾವಾಗಲೂ ಆತನಿಗೆ ರಾಮನ ಧ್ಯಾನವೇ ಧ್ಯಾನ.

ಒಮ್ಮೆ ಶ್ರೀರಾಮನ ಕುಶಲವಾರ್ತೆಯನ್ನು ತಿಳಿಯಲು ಸುಮಂತನನ್ನು ಕಳಿಸಿಕೊಟ್ಟ. ಮಂತ್ರಿ ಬಂದಾಗ ಆಶ್ರಮ ಶೂನ್ಯ

ವಾಗಿತ್ತು. ಅಕ್ಕಪಕ್ಕದ ಋಷಿ ಮುನಿಗಳಿಂದ ಅಲ್ಲಿಯ ಸಮಾಚಾರ ವನ್ನು ತಿಳಿದುಕೊಂಡ. ಸೀತಾದೇವಿಯನ್ನು ರಾವಣ ಅಪಹರಿಸಿಕೊಂಡು ಹೋಗಿದ್ದ. ಆಕೆಯನ್ನು-ಹುಡುಕಲು ರಾಮ-ಲಕ್ಷ್ಮಣರು ಕಿಷ್ಕಿಂಧೆಯ ಕಪಿ ರಾಜ್ಯಕ್ಕೆ ಹೋಗಿದ್ದರು.

ಇಕ್ಷ್ವಾಕುಕುಲದ ಏಕನಿಷ್ಠ ಸೇವಕ ಸುಮಂತನಿಗೆ ಅತ್ಯಂತ ದುಃಖವಾಯಿತು. ತನ್ನ ಮುಪ್ಪಿನ ಕಾಲದಲ್ಲಿ ಏನೇನನ್ನು ಕೇಳ ಬೇಕಾಯಿತಲ್ಲ ಎಂದು ಕಣ್ಣೀರು ಕರೆದ. ಹಾಗೆಯೇ ಖಿನ್ನ ಮನಸ್ಸಿನಿಂದ ಭರತನ ಹತ್ತಿರಕ್ಕೆ ಬಂದ.

ಭರತ ರಾಮಚಂದ್ರನ ಬಗೆಗೆ ಎಂತೆಂತಹ ಸವಿಗನಸುಗಳನ್ನು ಕಟ್ಟಿಕೊಂಡಿದ್ದನೋ. ಅವನಿಗೆ ಈ ವಿಷವಾರ್ತೆಯನ್ನು ಹೇಗೆ ತಿಳಿಸ ಬೇಕು ? ಸುಮಂತ ತನ್ನನ್ನು ತಾನೇ ಧಿಕ್ಕರಿಸಿಕೊಳ್ಳತೊಡಗಿದ— ಮಹಾರಾಜರ ಮರಣವನ್ನು ನೋಡಿದೆ; ಯುವರಾಜನಾದ ಶ್ರೀರಾಮ ಚಂದ್ರ ನಾರುಮುಡಿಗಳನ್ನುಟ್ಟು ಕಾಡು ಸೇರುವದನ್ನು ಕಂಡೆ. ಜಾನಕೀದೇವಿಯನ್ನು ರಾಕ್ಷಸ ಕದ್ದೊಯ್ದ ಸುದ್ದಿಯನ್ನು ಕೇಳಿದೆ. ಇದನ್ನು ಕೇಳಿ ಭರತನ ಅವಸ್ಥೆ ಏನಾಗುವದೋ ಅದನ್ನು ನೋಡದೆ ವಿಧಿಯಿಲ್ಲ. ಬಹುಶಃ ನನ್ನ ಪುಣ್ಯವೇ ತೀರಿಹೋಗಿರಬೇಕೆಂದು ತೋರುತ್ತಿದೆ. ಧಿಕ್ಕಾರವಿರಬೇಕು ನನ್ನ ಜನ್ಮಕ್ಕೆ !

ಇದೇ ವಿಚಾರದಲ್ಲಿಯೇ ಸುಮಂತ ಭರತನ ಸಮೀಪಕ್ಕೆ ಬಂದ. ಅವನ ಮನಸ್ಸು ದುಃಖದಿಂದ ಹಿಡಿತ ತಪ್ಪಿ ಹೋಗಿತ್ತು. ಯಾವು ದನ್ನು ಹೇಳಬೇಕು, ಯಾವುದನ್ನು ಬಿಡಬೇಕು ? ಇದೇ ವಿಚಾರದಲ್ಲಿ ತುಸು ಹೊತ್ತು ಸುಮ್ಮನೆ ನಿಂತ.

ಭರತನ ಆತುರ– ಆಗ್ರಹಗಳು ಹೆಚ್ಚಾದವು. ಸುಮಂತ ವರದಿ ಯನ್ನು ಒಪ್ಪಿಸಲೇಬೇಕಾಯಿತು. ಭರತಕುಮಾರಾ, ನಾನು ಹೋದಾಗ ರಾಮ ಲಕ್ಷ್ಮಣರು ಆಶ್ರಮದಲ್ಲಿ ಇರಲಿಲ್ಲ. ಕಿಷ್ಕಿಂಧೆಯ ಕಪಿ ರಾಜ್ಯಕ್ಕೆ ಹೋಗಿರುವುದಾಗಿ ತಿಳಿಯಿತು.

“ ಕಪಿ ರಾಜ್ಯವೇ ? ಕಪಿಗಳಿಗೆ ಮಾನವರಲ್ಲಿರಬೇಕಾದ ತಾರ

ತನ್ಯಜ್ಞಾನ ಇರುವದಿಲ್ಲವೆಂತೆ. ಅಲ್ಲಿ ಇವನಿಗೆ ಅದೆಷ್ಟು ಕಷ್ಟವಾಗುತ್ತಿರಬಹುದೋ." ಭರತ ನೊಂದು ನುಡಿದ.

"ಹಾಗಲ್ಲ ಕುಮಾರಾ, ಕೆಳತರಗತಿಯ ಪ್ರಾಣಿಗಳಲ್ಲಿಯೂ ಕೃತಜ್ಞತಾ ಬುದ್ಧಿ ಇದ್ದೇ ಇರುತ್ತದೆ. **ಸುಗ್ರೀವ** ಕಿಷ್ಕಿಂಧೆಯ ಕಪಿ ರಾಜ್ಯದ ಅರಸು. ಆದರೆ ಆತನ ಅಣ್ಣ **ವಾಲಿ** ಅವನ ರಾಜ್ಯವನ್ನೂ ಪತ್ನಿಯನ್ನೂ ಅಪಹರಿಸಿದ್ದ. **ಸಮದುಃಖಿ**ಯಾದ ಶ್ರೀರಾಮಚಂದ್ರ ಸುಗ್ರೀವನ ಪಕ್ಷಕ್ಕೆ ನಿಂತ. ಕಾಳೆಗದಲ್ಲಿ ಬಲಾಢ್ಯ ವಾಲಿಯನ್ನು ಸಂಹರಿಸಿದ. ತನ್ನ ಗೆಳೆಯನಿಗೆ ರಾಜ್ಯವನ್ನೂ ಪತ್ನಿಯನ್ನೂ ಪುನಃ ದೊರಕಿಸಿಕೊಟ್ಟ." ಸುಮಂತ ತೂಕ ತಪ್ಪದಂತೆ ಹೇಳಿಕೆಯನ್ನು ಕೊಟ್ಟ.

ಆದರೆ, **ಸಮದುಃಖಿ** ಎಂಬ ಶಬ್ದ ಭರತ ಕುಮಾರನ ತಲೆಯಲ್ಲಿ ಗಡಬಿಡಿಯನ್ನು ಎಬ್ಬಿಸಿತು. "ಆರ್ಯನೇ, ಸುಗ್ರೀವನೂ ರಾಮಚಂದ್ರನೂ ಸಮದುಃಖಿ ಎಂಬುದು ಹೇಗೆ?" ಭರತ ಕುತೂಹಲಿಯಾಗಿ ಕೇಳಿದ.

ಸುಮಂತ ಪುನಃ ತೊಡಕಿನಲ್ಲಿ ಸಿಕ್ಕ. ಯಾವುದನ್ನು ಮುಚ್ಚಿ ಇಟ್ಟಿದ್ದನೋ ಅದನ್ನೀಗ ಹೇಳಲೇಬೇಕಾಯಿತು. ಆದರೂ ಅರ್ಧಮರ್ಧ ಸತ್ಯವನ್ನು ಹೇಳಿದ— ಕುಮಾರಾ, ರಾಜ್ಯದ ಐಶ್ವರ್ಯ ಇಬ್ಬರಿಗೂ ಇಲ್ಲದಾಯಿತಲ್ಲವೇ? ಆ ದೃಷ್ಟಿಯಿಂದ ಹೇಳಿದೆ ಅಷ್ಟೇ.

"ಇಲ್ಲ, ಇಲ್ಲ; ಪೂಜ್ಯರೇ, ನನ್ನಿಂದ ಏನನ್ನೋ ಮುಚ್ಚಿಡುತ್ತಿದ್ದೀರಿ. ಮಹಾರಾಜರ ಆಣೆಯಿದೆ ನಿಮಗೆ. ಏನಿದ್ದದ್ದನ್ನು ಸ್ಪಷ್ಟವಾಗಿ ಹೇಳಲೇಬೇಕು." ಭರತ ಬಲವಂತ ಮಾಡಿದ.

"ಮುನಿಜನರನ್ನು ರಕ್ಷಿಸುತ್ತಿದ್ದ ಕಾರಣದಿಂದ ರಾಮಚಂದ್ರನಿಗೂ ರಾಕ್ಷಸರಿಗೂ ಹಗೆತನ ಹುಟ್ಟಿತು. ರಾಮನಿಲ್ಲದ ಕಾಲದಲ್ಲಿ ಲಂಕೆಯ ರಾವಣ ಮೋಸದ ಮುನಿವೇಷದಿಂದ ಬಂದ. ಸೀತಾದೇವಿಯನ್ನು ಎತ್ತಿಕೊಂಡು ಹೋದ!" ಸುಮಂತ ಗದ್ಗದಿತನಾಗಿಯೇ ಹೇಳಿದ.

"ಹಾ ss! ಅತ್ತಿಗೇ ss!" ಎನ್ನುತ್ತ ಭರತ ಮೂರ್ಛೆಹೋದ. ಎಚ್ಚರವಾದಾಗ ಅಣ್ಣನನ್ನು ಕುರಿತು ಪ್ರಳಾಪಿಸಿದ. "ತಂದೆ–ಬಂಧುಗಳಿಂದ ಅಗಲಿ ನನ್ನ ರಾಮಚಂದ್ರ ಅರಣ್ಯದಲ್ಲಿ ಅದೆಷ್ಟೋ ಕಷ್ಟಗಳನ್ನು ಅನುಭವಿಸುತ್ತಿದ್ದ. ಈಗ ಪತ್ನಿಯನ್ನು ಕಳೆದುಕೊಂಡು ಮೋಡಗಳು ಮುಚ್ಚಿದ ಚಂದ್ರನಂತೆ ಕಳಾಹೀನನಾಗಿರಬಹುದಲ್ಲವೇ?"

ಇದೆಲ್ಲವೂ ಕೈಕೇಯಿಯ ರಾಜ್ಯ ಲೋಭದಿಂದಲೇ ಆಯಿತಲ್ಲ, ಎಂದು ಭರತನಿಗೆ ತಾಯಿಯ ಮೇಲೆ ತುಂಬಾ ಕೋಪ ಬಂದಿತು. ಸುಮಂತನನ್ನು ಕರೆದುಕೊಂಡು ಕೈಕೇಯಿಯ ಅಂತಃಪುರಕ್ಕೆ ಭರದಿಂದ ಸಾಗಿದ; ಭರತ ಬಂದಿದ್ದಾನೆಂದು ರಾಜ್ಯ ಲೋಭಿಯಾದ ಕೈಕೇಯಿದೇವಿಗೆ ತಿಳಿಸು– ಎಂದು ಚೇಟಿಗೆ ಹೇಳಿದ.

ಭರತ ಅಕಸ್ಮಾತ್ತಾಗಿ ಬಂದುದು ಕೈಕೇಯಿಗೆ ವಿಚಿತ್ರವೇ ಎನಿಸಿತು. ಆದರೆ ಸುಮಂತ ರಾಮಚಂದ್ರನ ಹತ್ತಿರ ಹೋಗಿ ಬಂದುದನ್ನು ಈ ಮೊದಲೇ ತಿಳಿದಿದ್ದಳು. ಆ ಬಗೆಗೆ ಏನಾದರೂ ಇದ್ದಿರಬೇಕೆಂದು ಮಗನನ್ನು ಬರಮಾಡಿಕೊಂಡಳು.

"ಮಗು, ಸುಮಂತರು ರಾಮನ ಹತ್ತಿರ ಹೋಗಿ ಬಂದರಂತೆ ಅಹುದೇ?" ಸರಳವಾಗಿ ಕೇಳಿದಳು ಕೈಕೇಯಿ.

"ಹೋಗಿ ಬಂದದ್ದಷ್ಟೇ ಅಲ್ಲ; ನಿನಗೊಂದು ಆನಂದದ ವಾರ್ತೆಯನ್ನು ತಂದಿದ್ದಾರೆ" ಭರತ ಕಟುವಾಗಿಯೇ ಆರಂಭಿಸಿದ.

"ಹಾಗಾದರೆ ಕೌಸಲ್ಯಾ, ಸುಮಿತ್ರಾ ರಾಣಿಯರನ್ನು ಕರೆಸಲೇ, ಆ ಆನಂದ ವಾರ್ತೆಯನ್ನು ಕೇಳುವುದಕ್ಕೆ?" ಪುನಃ ಸರಳವಾಗಿಯೇ ಕೇಳಿದಳು ಕೈಕೇಯಿ.

"ಅವರ ಅವಶ್ಯಕತೆಯಿಲ್ಲ. ನಿನಗೊಬ್ಬಳಿಗೇ ಆನಂದವಾಗುವ ಸುದ್ದಿಯದು. ಅದನ್ನು ನೀನೇ ಕೇಳಬೇಕು!" ಕೆಣಕು ನುಡಿದ ಭರತ. "ಕೇಳು. ರಾಜ್ಯ ಲೋಭದಿಂದ ರಾಮಚಂದ್ರನನ್ನು ಅಡವಿಗೆ ಅಟ್ಟಿದೆಯಲ್ಲವೇ? ಅಡವಿಯಲ್ಲಿ ಆತನ ಪತ್ನಿಯನ್ನು ರಾಕ್ಷಸರು

ಅಪಹರಿಸಿಕೊಂಡು ಹೋಗಿದ್ದಾರೆಂತೆ. ಇದು ನಿನಗೆ ಬಹಳ ಆನಂದದ ವಾರ್ತೆಯಲ್ಲವೇ ? ನಿನ್ನಂಥ ಸೊಸೆಯನ್ನು ಮನೆಯಲ್ಲಿ ಹೊಗಿಸಿಕೊಂಡದ್ದಕ್ಕಾಗಿ, ಪರಮ ಪರಾಕ್ರಮಿಗಳಾದ ಇಕ್ಷ್ವಾಕುವಂಶದ ಅರಸುಗಳ ಸೊಸೆಯನ್ನು ಹೆರವರು ಹಾರಿಸಿಕೊಂಡು ಹೋಗುವಂತಾಯಿತು ! ” ಭರತ ಇನ್ನೂ ಭುಸುಗುಟ್ಟುತ್ತಿದ್ದ.

ಭರತನ ಕಟುಕ್ತಿಗಳಿಂದ ಕೈಕೇಯಿಗೆ ಕೆಡುಕೆನಿಸಿತು. ಈ ವರೆಗೆ ಆಕೆ ತನ್ನ ಅಂತರಂಗದ ಆಳದಲ್ಲಿ ಕೆಲವು ಮಾತುಗಳನ್ನು ಹುದುಗಿಸಿ ಇಟ್ಟಿದ್ದಳು. ಈಗ ಅವುಗಳನ್ನು ಬಯಲಿಗೆ ತರುವ ಸಮಯ ಬಂದಿತ್ತು. ಬಾಯಿಬಿಟ್ಟು ಹೇಳಿದಳು:

ಭರತಾ, ಮಹಾರಾಜರಿಗೆ ಬಂದಿದ್ದ ಶಾಪವನ್ನು ಬಲ್ಲೆಯಾ ?

ಮಹಾರಾಜರಿಗೆ ಶಾಪ ? ಈ ಬಗೆಗೆ ಒಂದಕ್ಷರವೂ ಗೊತ್ತಿರಲಿಲ್ಲ ಭರತನಿಗೆ. ಸುಮಂತರೇ, ತಾಯಿ ಇದೇನು ಹೇಳುತ್ತಿದ್ದಾಳೆ? ಎಂದು ಸುಮಂತನನ್ನು ಕೇಳಿದ.

“ನಿಜ, ಯುವರಾಜರೇ. ನೀವಿನ್ನೂ ಹುಟ್ಟಿರಲಿಲ್ಲ. ಆಗ ಒಮ್ಮೆ ಮಹಾರಾಜರು ಬೇಟೆಯಾಡಲು ಅಡವಿಗೆ ಹೋಗಿದ್ದರು; ದಣಿದು ಜಲಾಶಯದ ದಂಡೆಯ ಮೇಲೆ ಕುಳಿತಿದ್ದರು. ಜಲಾಶಯದಲ್ಲಿ ‘ ಗುಡು ಗುಡು ’ ಎಂದು ಸಪ್ಪಳಾಯಿತು. ಆನೆಯೇ ಬಂದಿರಬೇಕೆಂದು ಮಹಾರಾಜರಿಗೆ ಹೊಳೆಯಿತು. ಆ ದನಿಯ ದಿಕ್ಕನ್ನೇ ಹಿಡಿದು ಬಾಣ ಬಿಟ್ಟರು. ಉತ್ತರ ಕ್ಷಣದಲ್ಲಿಯೇ ‘ಅಯ್ಯೋ ಸತ್ತೆ !’ ಎಂಬ ಹಾ ಹಾ ಧ್ವನಿ ಕೇಳಿತು. ಮಹಾರಾಜರು ಹೌಹಾರಿ ಓಡಿ ಹೋಗಿ ನೋಡಿದರು. ಬಾಣ ಒಬ್ಬ ಮುನಿಕುಮಾರನಿಗೆ ಪ್ರಾಣಾಂತಿಕ ಗಾಯ ಮಾಡಿತ್ತು. ಅವನು ತನ್ನ ಮುಪ್ಪಿನ ತಾಯ್ತಂದೆಗಳಿಗೆ ನೀರು ತರಲು ಬಂದಿದ್ದನೆಂತೆ. ಮಾಡುವದೇನು ? ಅವನು, ನನ್ನ ತಾಯ್ತಂದೆಗಳಿಗೆ ಈ ನೀರನ್ನು ಕೊಡು ಎನ್ನುತ್ತಲೇ ಪ್ರಾಣಬಿಟ್ಟ. ದಶರಥ ದೊರೆ ಮುದುಕ ಮುನಿಗಳ ಹತ್ತಿರ ಹೋದರು. ನಡೆದುದೆಲ್ಲವನ್ನೂ ನಿವೇದಿಸಿದರು. ಮಗನ ಮರಣದಿಂದ ತಪ್ತನಾದ

ಮುನಿ— ನನ್ನಂತೆ ನೀನು ಪುತ್ರ ವಿಯೋಗದ ಶೋಕದಿಂದಲೇ ಸಾಯುವಿ– ಎಂದು ಶಾಪ ಕೊಟ್ಟ" ಸುಮಂತ ಸ್ವಲ್ಪದರಲ್ಲಿಯೇ ಶಾಪ ವೃತ್ತಾಂತವನ್ನು ಹೇಳಿದ.

"ತಿಳಿಯಿತೇ ಮಗೂ. ಮುನಿಗಳ ಶಾಪ ಸುಳ್ಳಾಗಲಾರದು, ಸುಳ್ಳಾಗಬಾರದು. ಈ ಕಾರಣಕ್ಕಾಗಿಯೇ, ನಾನು ಅಪವಾದವನ್ನು ಹೊತ್ತು ರಾಮನನ್ನು ವನಕ್ಕೆ ಕಳಿಸಿದೆ; ರಾಜ್ಯಲೋಭ ನನಗಿರಲಿಲ್ಲ." ಕೈಕೇಯಿ.

"ಮಗನನ್ನು ಅಗಲಿಸುವುದೇ ಆಗಿದ್ದರೆ, ನನ್ನನ್ನೇ ದೂರ ಕಳಿಸಬಹುದಿತ್ತಲ್ಲ?" ಭರತನ ಪುನಃ ಪ್ರಶ್ನೆ.

"ನೀನು ಹುಟ್ಟಿನಿಂದಲೂ ಮಾವನ ಮನೆಯಲ್ಲಿಯೇ ಬೆಳೆದಿ. ನಿನ್ನ ವಿಯೋಗ ಮಹಾರಾಜರಿಗೆ ಅಷ್ಟೊಂದು ಆಘಾತ ಮಾಡುತ್ತಿರಲಿಲ್ಲ" ಕೈಕೇಯಿ.

"ಒಳ್ಳೇದು ಹದಿನಾಲ್ಕು ವರುಷಗಳ ವನವಾಸದ ಕಟ್ಟು ಹಾಕುವ ಕಾರಣವೇನಿತ್ತು?" ಭರತ ತಪ್ಪಿನಲ್ಲಿ ಹಿಡಿಯಬೇಕೆನ್ನುತ್ತಿದ್ದ.

"ಅದು ವಿಧಾತನ ಇಚ್ಛೆ. ನಾನು **ಚತುರ್ದಶ ವಾಸರ** ಎನ್ನಬೇಕೆಂದಿದ್ದೆ. ಗಡಬಿಡಿಯಲ್ಲಿ 'ವಾಸರ'ದ ಬದಲು **ಚತುರ್ದಶ ವರ್ಷ**ವಾಗಿ ಹೋಯಿತು." ತಪ್ಪನ್ನು ಒಪ್ಪಿಕೊಂಡಳು ಕೈಕೇಯಿ; ಮತ್ತೆ ಹೇಳಿದಳು. "ಇವೆಲ್ಲ ಮಾತುಗಳನ್ನು ನೀನು ಒಮ್ಮೆಲೆ ನಂಬಲಾರಿ. ವಸಿಷ್ಠ ವಾಮದೇವ ಗುರುಗಳಿಗೆ ಈ ವಿಷಯಗಳೆಲ್ಲ ತಿಳಿದಿವೆ. ಬೇಕಾದರೆ ಅವರನ್ನೇ ಕೇಳಿಕೊಳ್ಳು!"

ಕೈಕೇಯಿಯಲ್ಲಿ ಕಪಟವಿಲ್ಲವೆಂದು ಭರತನಿಗೆ ಹೊಳೆಯಿತು. "ತಾಯಿ, ನಿನಗೆ ಬಿರು ನುಡಿಗಳನ್ನು ಆಡಿದೆ. ಅಜ್ಞ ಬಾಲಕನ ತಪ್ಪುಗಳನ್ನು ಕ್ಷಮಿಸಿಬಿಡು" ಎಂದು ಖಿನ್ನವಾಗಿ ನಿಂತ.

ಕೈಕೇಯಿಗೆ ಮಾತೃಹೃದಯ ಉಕ್ಕಿ ಬಂದಿತು. ಮಗನನ್ನು ಅಪ್ಪಿಕೊಂಡು ಮುದ್ದಾಡಿದಳು.

ಭರತ ಅಲ್ಲಿಯೇ ಕಾಲ ಕಳೆಯುವಂತೆ ಇರಲಿಲ್ಲ. ಸೈನ್ಯ ಸಹಿತವಾಗಿ ರಾಮನ ಸಹಾಯಕ್ಕೆ ಹೊರಡಬೇಕೆಂದು ಸೈನಿಕರಿಗೂ ಅಧಿಕಾರಿಗಳಿಗೂ ಅಪ್ಪಣೆ ಮಾಡಿದ.

ಅಷ್ಟರಲ್ಲಿ, ಮತ್ತೊಂದು ಎದೆಯೊಡೆಸುವ ಸುದ್ದಿ ಬಂದಿತು. ಸೀತಾಪಹರಣದ ಸುದ್ದಿ ಕೌಸಲ್ಯೆಯ ಅಂತಃಪುರವನ್ನು ಮುಟ್ಟಿತು. ಕೂಡಲೆ, ಹಾಽಽ ಸೀತೇಽಽ! ಎಂದು ಎಚ್ಚರದಪ್ಪಿ ಬಿದ್ದಳು ಕೌಸಲ್ಯಾ ಮಹಾರಾಣಿ. ಅವಳನ್ನು ಸಮಾಧಾನ ಮಾಡುವುದಕ್ಕಾಗಿ ಕೈಕೇಯಿರಾಣಿ ಭರತ ಎಲ್ಲರೂ ಅತ್ತ ಹೊರಟರು.

ಮೂರು ಲೋಕಗಳಿಗೂ ಕಂಟಕನಾದ ರಾವಣನಿಗೂ ಪುಣ್ಯ ಮೂರ್ತಿಯಾದ ರಾಮಚಂದ್ರನಿಗೂ ಕಡುಕಾಳಗ ನಡೆಯಿತು. ನಾರೀ ಚೋರನಾದ ರಾವಣನನ್ನು ರಾಮಚಂದ್ರ ಕೊಂದು ಹಾಕಿದ. ವಿಭೀ ಷಣ ರಾವಣನ ತಮ್ಮ. ಆದರೂ ರಾಕ್ಷಸರ ತಾಮಸತನ ಅವನಲ್ಲಿ ಇರಲಿಲ್ಲ. ಆ ಸಾತ್ತ್ವಿಕನನ್ನು ರಾಮಚಂದ್ರ ಲಂಕೆಯ ದೊರೆಯ ನ್ನಾಗಿ ಮಾಡಿದ; ತಾನು ಸೀತಾ ಸಹಿತವಾಗಿ ಪುನಃ ಜನಸ್ಥಾನಕ್ಕೆ ಆಗಮಿಸಿದ. ಆತನನ್ನು ಕಂಡು ಋಷಿ ಮುನಿಗಳೆಲ್ಲ ಆನಂದಪಟ್ಟರು; ಶುಭಾಶೀರ್ವಾದಗಳಿಂದ ಹರಸಿದರು. ಸೀತೆಯ ಪವಿತ್ರತೆಯ ಬಗೆಗೆ ದೇವತೆಗಳೂ ಸಿದ್ಧರೂ ಸತ್ಯ ಪ್ರಮಾಣಗಳನ್ನು ಕೊಟ್ಟರು.

ರಾಮಚಂದ್ರನ ಸಂಗಡ ಸುಗ್ರೀವನ ಕಪಿವೀರರೂ ಜಾಂಬ ವಂತನ ಕರಡಿ ಕಲಿಗಳೂ ವಿಭೀಷಣನ ರಾಕ್ಷಸ ರಣಧೀರರೂ ಬಂದಿ ದ್ದರು. ಇವರೆಲ್ಲರೂ ತಮ್ಮ ಒಡೆಯರಂತೆಯೇ ಸಾತ್ವಿಕರು. ಅವ ರಿಂದ ಮುನಿಗಳಿಗೆ ಯಾವ ತೊಂದರೆಯೂ ಆಗಲಿಲ್ಲ.

ರಾಮಚಂದ್ರನ ಮನಸ್ಸಿಗೆ ಈಗ ಬಹಳ ಸಮಾಧಾನವಾಗಿತ್ತು. ಅವನು ಪ್ರೈಮರೆತು ಮೆರೆಯುವ ರಾವಣನನ್ನು ಸಂಹಾರ ಮಾಡಿದ್ದ. ಸರ್ವ ಸದ್ಗುಣಗಳ ಖನಿಯಾದ ಸೀತಾದೇವಿಯನ್ನು ಪುನಃ ಪಡೆದಿದ್ದ. ಸೀತಾದೇವಿಯ ಪವಿತ್ರತೆಯನ್ನು ಅಗ್ನಿಯೇ ಮೊದಲಾದ ದೇವತೆಗಳು ಸರ್ವರ ಇದಿರಿಗೆ ಸಿದ್ಧಮಾಡಿದ್ದರು. ಇಂತಹ ಸಮಾಧಾನದ ಸ್ಥಿತಿ

ಯಲ್ಲಿ ಆ ಜನಸ್ಥಾನ, ಆ ತಪೋವನಗಳು ಮತ್ತಷ್ಟು ರಮಣೀಯವಾಗಿ ತೋರುತ್ತಿದ್ದುವು.

ಸೀತಾದೇವಿ ಋಷಿ ಪತ್ನಿಯರನ್ನು ನಮಸ್ಕರಿಸಿದಳು; ಅವರಿಂದ ಮಂಗಲಾಶೀರ್ವಾದವನ್ನು ಪಡೆದಳು. ರಾಮಚಂದ್ರ ಪತ್ನಿಯನ್ನು ಕುರಿತು ಪ್ರಶ್ನೆ ಮಾಡಿದ– ಸೀತೇ, ನಾವು ಈ ಜನಸ್ಥಾನದಲ್ಲಿ ವಾಸವಾಗಿದ್ದುದು ನೆನಪಿದೆಯೇ? ಆಗ ನೀನು ಮಕ್ಕಳಂತೆ ಬೆಳೆಸುತ್ತಿದ್ದ, ನಿನ್ನ ಮಾನಸ ಸಂತಾನವಾದ ಈ ಗಿಡಬಳ್ಳಿಗಳನ್ನು ಗುರುತಿಸಬಲ್ಲೆಯಾ?

"ನನ್ನ ಸಂತಾನವನ್ನು ನಾನು ಮರೆಯಬಲ್ಲೆನೇ? ಆದರೆ ಇವು ಆಗ ಬಹಳ ಸಣ್ಣವಾಗಿದ್ದುವು. ಅವುಗಳ ಎಲೆಯನ್ನು ಸಹಜವಾಗಿಯೇ ನೋಡಬಹುದಾಗಿತ್ತು. ಈಗ ಆ ಎಲೆಗಳನ್ನು ಕತ್ತೆತ್ತಿ ನೋಡಬೇಕಾಗುತ್ತಿದೆ? ಸೀತೆ ಆನಂದದಿಂದ ಉತ್ತರಿಸಿದಳು.

"ನಿಜ, ನಿಜ. ಕೀಳು ಮೇಲುಗಳು ಕಾಲ ಪುರುಷನ ಕೈಚಳಕವೆಂದೇ ಹೇಳಬೇಕು...." ತತ್ತ್ವಜ್ಞಾನಿಯಂತೆ ನುಡಿದ ರಾಮಚಂದ್ರ.

ಈ ಆನಂದದ ಭರದಲ್ಲಿ ಅವರು ಮತ್ತೆ ಹಲವಾರು ಹಳೆಯ ಸುದ್ದಿಗಳನ್ನು ನೆನೆದರು. ಚಿನ್ನದ ಚಿಗರೆಯ ಮಾತು ಬಂದಾಗ ಮಾತ್ರ ಜಾನಕಿಯ ಮೈ ನಡುಗಿಬಿಟ್ಟಿತು. ಆ ನೆನಪನ್ನು ಮಾತ್ರ ಎತ್ತಬೇಡಿರಿ, ಎಂದು ಪತಿಯನ್ನು ಕೇಳಿಕೊಂಡಳು.

ರಾಮ, ಸೀತೆಯರಲ್ಲಿ ಈ ಸವಿನೆನಹಿನ ಸಂವಾದ ಸಾಗಿತ್ತು. ಆ ಹೊತ್ತಿಗೆ ಅಡವಿಯೊಳಗೆ ಪ್ರಚಂಡ ಸೈನ್ಯದ ಕೋಲಾಹಲ ಕೇಳಿಬರತೊಡಗಿತು. ಶಂಖ, ಕಹಳೆ, ಭೇರಿಗಳ ನಿನಾದದಿಂದ ಅರಣ್ಯವೆಲ್ಲ ಪ್ರತಿಧ್ವನಿಸಹತ್ತಿತು. ಸೈನಿಕರ ವೀರಾವೇಶಗಳಿಂದ ಕಿವಿ ಗಡಚಿಕ್ಕುವಂತಾಯಿತು. ಸೈನ್ಯದ ತುಳಿತದಿಂದ ಎದ್ದ ಧೂಳ ಆಕಾಶವನ್ನು ಅಡರುತ್ತಿತ್ತು.

ಲಕ್ಷ್ಮಣ ಮುಂದಾಗಿ ಹೋಗಿ ನೋಡಿದ. ಭರತ ಪ್ರಚಂಡ ಸೇನಾಸಹಿತನಾಗಿ ಬರುತ್ತಿದ್ದ. ಆತನ ಸಂಗಡ ಮೂವರು ಮಹಾ

ರಾಣಿಯರೂ ಇದ್ದರು. ರಾಮ ಲಕ್ಷ್ಮಣ ಸೀತೆಯರು ಅವರನ್ನು ಇದಿರುಗೊಂಡರು; ನಮಸ್ಕಾರಮಾಡಿ ಹರಕೆಗಳನ್ನು ಪಡೆದರು. ಭರತ–ರಾಮಚಂದ್ರರು ಗಾಢಾಲಿಂಗನ ಮಾಡಿದರು.

ಅದೇ ಆನಂದದ ಸಮಯವನ್ನು ಸಾಧಿಸಿ ಭರತ ಕೇಳಿದ:

ಅಣ್ಣಾ, ಇನ್ನುಮೇಲಾದರೂ ಈ ರಾಜ್ಯದ ಭಾರವನ್ನು ಸ್ವೀಕರಿಸುವೆಯಲ್ಲವೇ?

ಮಗನ ಮಾತಿಗೆ ಕೈಕೇಯಿದೇವಿ ಬೆಂಬಲ ಕೊಟ್ಟಳು; ಮಗು ರಾಮಚಂದ್ರಾ, ಹಿಂದಾದುದನ್ನು ಮರೆತುಬಿಡು. ನೀನೇ ಅಯೋಧ್ಯೆಯ ಅರಸಾಗಬೇಕೆಂದು ಎಂದಿನಿಂದಲೂ— ನನ್ನ ಪ್ರಬಲೇಚ್ಛೆ. ಮಾತೆಯ ಮಾತನ್ನು ಮನ್ನಿಸುವೆಯಲ್ಲವೇ?

ವಸಿಷ್ಠ ವಾಮದೇವ ಋಷಿಗಳು ಪಟ್ಟಾಭಿಷೇಕದ ಸಿದ್ಧತೆಯೊಡನೆಯೇ ಅಲ್ಲಿಗೆ ಆಗಮಿಸಿದ್ದರು. ಸರ್ವ ಪವಿತ್ರ ನದಿಗಳ ತೀರ್ಥವನ್ನು ಸುವರ್ಣ ಕಲಶಗಳಲ್ಲಿ ತುಂಬಿ ತರಲಾಗಿತ್ತು. ಪುರಪ್ರಮುಖರು ತಂಡತಂಡವಾಗಿ ಶ್ರೀರಾಮನ ದರ್ಶನಕ್ಕೆ ಬಂದಿದ್ದರು.

ರಾಮಚಂದ್ರ ತಾಯಿ–ತಂದೆಗಳ ಆಜ್ಞೆಯನ್ನು ಆಚರಿಸಿ ಕೃತಾರ್ಥನಾಗಿದ್ದ. ಈಗ ಕೈಕೇಯಿದೇವಿ, ಭರತ, ಗುರುಗಳು ಮತ್ತು ನಾಗರಿಕರು ಇವರೆಲ್ಲರ ಇಚ್ಛೆಯಂತೆ ಪಟ್ಟಾಭಿಷೇಕ ಮಾಡಿಸಿಕೊಳ್ಳಲು ಸಿದ್ಧನಾದ.

'ರಾಮಚಂದ್ರನಿಗೆ ವಿಜಯವಾಗಲಿ!' 'ರಾವಣಾಂತಕನಿಗೆ ವಿಜಯವಾಗಲಿ!' ಮುಂತಾದ ಜಯಕಾರಗಳಿಗೆ ದಿಕ್ತಟಗಳೂ ದನಿಗೂಡಿಸಿದವು. ಪುರೋಹಿತರೂ ನಿವೇದಕರೂ 'ರಾಮರಾಜ್ಯಾರೋಹಣ'ವನ್ನು ಉಗ್ಗಡಿಸಿದರು. ಮಂತ್ರಿಗಳೂ ಪುರಜನರೂ ತಮತಮಗಾದ ಆನಂದವನ್ನು ವ್ಯಕ್ತಮಾಡಿದರು.

ರಾಮರಾಜ್ಯಾಭಿಷೇಕ ಸಮಾರಂಭ ಸಾಂಗವಾಗಿ ನೆರವೇರಿತು. ಆಗ ರಾಮಚಂದ್ರ ಮುಗಿಲಿನತ್ತ ಮೋರೆ ಮಾಡಿ— ಸ್ವರ್ಗಸ್ಥ ಪಿತೃಗಳೇ, ನಿಮಗಿನ್ನು ಯಾವ ಚಿಂತೆಯೂ ಬೇಡ. ಸುಖವಾಗಿ ಕಾಲ

ಕಳೆಯಿರಿ. ನಿಮ್ಮ ಅಪ್ಪಣೆಯಂತೆ ನಡೆದಿರುವೆ. ನಿಮ್ಮ ಇಚ್ಛೆಗಳನ್ನು ಪೂರಯಿಸಿರುವೆ. ಸತ್ಪುರುಷರ ಸಂಕಟಗಳನ್ನು ನಿವಾರಿಸುವದಕ್ಕಾ ಈ ರಾಜ್ಯ ಭಾರವನ್ನು ಹೊತ್ತಿರುವೆ. ಧರ್ಮಶಾಸ್ತ್ರದ ನಿಯಮ ಗಳಂತೆ ಪ್ರಜೆಗಳನ್ನು ಪಾಲಿಸುವ ಹೊಣೆಯನ್ನು ತಪ್ಪದೆ ನಡೆ ಕೊಡುವೆ— ಎಂದು ಶಪಥ ವಿಧಿಯನ್ನು ಪೂರಯಿಸಿದ.

ಶುಭಮುಹೂರ್ತದಲ್ಲಿ ರಾಮಚಂದ್ರ ಸಿಂಹಾಸನವನ್ನು ಏರಿದ ಆತನ ಮೇಲೆ ಛತ್ರ ಚಾಮರಗಳನ್ನು ಹಿಡಿಯಲಾಯಿತು. ಭರ ಅದೆಷ್ಟೋ ಹೊತ್ತು ಆತನನ್ನೇ ನೋಡುತ್ತ ನಿಂತ. ಅವನ ಆನಂ ನಿಮಿಷ ನಿಮಿಷಕ್ಕೆ ಉಕ್ಕೇರುತ್ತಿತ್ತು. ರಾಮರಾಜ್ಯಾರೋಹಣದಿಂ ತಮ್ಮ ಕುಲದ ದುರ್ದಿನಗಳೆಲ್ಲ ದೂರವಾದುವು; ಇನ್ನು ರಘುವಂ ದಿವ್ಯತೇಜದಿಂದ ತೊಳಗುತ್ತಿದೆ, ಬೆಳಗುತ್ತಿದೆ.... ಮುಂತಾಗಿ ಶತ್ರುಘ ನಿಗೆ ಎನಿಸಿತು. ಶ್ರೀ ರಾಮ ದೊರೆಯಾದುದರಿಂದ ಸೂರ್ಯ ಸಂ ತಿಯೇ ಧನ್ಯವಾಯಿತು; ಎನಿಸುತ್ತಿತ್ತು ಲಕ್ಷ್ಮಣನಿಗೆ.

ಸುಗ್ರೀವ, ನೀಲ, ಜಾಂಬವಂತ, ಮೈಂದ, ಹನುಮಂ ಮುಂತಾದವರು ಶ್ರೀ ರಾಮನಿಗೆ ಹೃತ್ಪೂರ್ವಕ ಅಭಿನಂದನೆಗಳನ ಅರ್ಪಿಸಿದರು; ದಿವ್ಯಕಾಣಿಕೆಗಳನ್ನು ಕೊಟ್ಟರು.

ಈ ಶುಭ ಸಮಾರಂಭದಿಂದ ಕೈಕೇಯಿಗೆ ಪರಮಾನಂ ವಾಯಿತು. ಈ ರಾಮಾಭ್ಯುದಯವನ್ನು ಮತ್ತೊಮ್ಮೆ ಅಯೋಧ ಯಲ್ಲಿ ನೋಡಬೇಕೆಂದು ನನಗೆ ಪ್ರಬಲ ಇಚ್ಛೆಯಾಗಿದೆ, ಎಂದಳ

ಲಕ್ಷ್ಮಣ ಆ ಮಾತಿಗೆ ಬೆಂಬಲಕೊಟ್ಟ! ನಿಜ, ನಿಜ; ನಕ್ಷ ಗಳೊಡನೆ ಉದಯಿಸುತ್ತಿರುವ ಚಂದ್ರನಂತೆ, ಪರಿವಾರ ಸಹಿತನಾ ಶ್ರೀ ರಾಮರಾಜನನ್ನು ಪುರನಿವಾಸಿಗಳು ನೋಡಿ ಧನ್ಯರಾಗಲಿ!

ಅಂದೇ ಅವರೆಲ್ಲ ಪುಷ್ಪಕ ವಿಮಾನವನ್ನು ಏರಿ ಅಯೋಧ್ಯೆ ಪಯಣ ಬೆಳೆಸಿದರು.

---